“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

24ನೇ ಮಾರ್ಚ್ 2020
ಮಂಗಳವಾರ

## ವಿಷಯಾನುಕ್ರಮಣಿಕೆ


1. **ಲ್ಯಾಪ್‌ಟಾಪ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸದನ ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಚರ್ಚೆ.**
   - ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
   - ಡಾ॥ ವೈ.ಎ.ನಾರಾಯಣಸ್ವಾಮಿ
   - ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
   - ಡಾ॥ ಸಿ.ಎನ್.ಅಶ್ವಥ್ ನಾರಾಯಣ್(ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು)
2. **ಪ್ರಕಟಣೆ**
3. **ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.**

   **ರಾಜ್ಯಾದ್ಯಂತ ಕೋವಿಡ್-19 ಕೊರೊನಾ ಖಾಯಿಲೆಯು ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು.**

   - ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
   - ಡಾ॥ ಸಿ.ಎನ್.ಅಶ್ವಥ್ ನಾರಾಯಣ್(ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು)
   - **ಶ್ರೀ ಸಿ.ಎಂ.ಇಬ್ರಾಹಿಂ**
   - **ಶ್ರೀ ಪುಟ್ಟಣ್ಣ**
   - ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು)
4. **ಪ್ರಕಟಣೆಗಳು**
5. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**


“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಧನ ವಿನಿಯೋಗ ವಿಧೇಯಕ, 2020**
**– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಆ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ: 2) ವಿಧೇಯಕ, 2020**
**– ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು)**
**– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಇ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2020**
**– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**7. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**8. ನಿಯಮ 72 ಮತ್ತು ನಿಯಮ 330ರಡಿಯಲ್ಲಿ ಸ್ವೀಕರಿಸಲಾದ ಸೂಚನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**9. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಲಿಖಿತ ಹೇಳಿಕೆಗಳ ಮಂಡನೆ.**

**ಅ) ಡಿಪ್ಲೋಮಾ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಭಾವನೆ ಪರಿಷ್ಕರಿಸುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಮಂಡ್ಯ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಸಾಮಾಜಿಕ ಭದ್ರತಾ ಯೋಜನೆಗಳಡಿ ವೃದ್ಧರು, ವಿಧವೆಯರು, ಅಂಗವಿಕಲರು ಸೇರಿ ವಿವಿಧ ಸ್ಥರದ ಜನರಿಗೆ ನೀಡುವ ಮಾಸಿಕ ಪಿಂಚಣಿಯು ಸ್ಥಗಿತಗೊಂಡಿರುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**10. ಪ್ರಕಟಣೆ**

**11. ಸಾರಾಂಶ.**

<><><>

(695) 24.3.2020 11.00 ಪಿಕೆ:ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 24ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿನ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನ ಪ್ರಾರಂಭವಾಗುತ್ತಿದ್ದಂತೆ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಮಾನ್ಯ ಸದಸ್ಯರುಗಳು ಲ್ಯಾಪ್‌ಟಾಪ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರವನ್ನು ವಿರೋಧಿಸಿ ಬಾವಿಯೊಳಗೆ ಬಂದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ಕೆಳಮನೆಯ ಬಿಎಸಿ ಯಲ್ಲಿ, ಕೊರೊನಾ ವೈರಸ್ ಅನ್ನು ತಡೆಗಟ್ಟಲು ಮುಂಜಾಗರೂಕತಾ ಕ್ರಮವಾಗಿ ರಾಜ್ಯದಾದ್ಯಂತ ಲಾಕ್‌ಡೌನ್ ಘೋಷಿಸಿರುವುದರಿಂದ ನಮ್ಮ ಎರಡೂ ಮನೆ ಅಧಿವೇಶನವನ್ನು ಮೊಟಕುಗೊಳಿಸಬೇಕಾದಂತಹ ಅನಿವಾರ್ಯತೆಯ ಬಗ್ಗೆ ಉಲ್ಲೇಖ ಮಾಡಿ ನಿರ್ಣಯ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಇವತ್ತಿನ ಕಾರ್ಯಕಲಾಪ ಮುಗಿದ ನಂತರ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಬೇಕೆಂದು ಕೆಳಮನೆಯಲ್ಲಿ ತೀರ್ಮಾನವಾಗಿರುವುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ.

ಮತ್ತೆ, ಲ್ಯಾಪ್‌ಟಾಪ್‌ಗೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಬಂದಿದ್ದಾರೆ. ಸರ್ಕಾರ ಈ ಕುರಿತು ಏನು ಉತ್ತರ ಕೊಡುತ್ತದೆಯೋ ಅದನ್ನು ತಾವೆಲ್ಲರೂ ಕೇಳಬೇಕು ಎನ್ನುವುದು ನನ್ನ ವಿನಂತಿಯಾಗಿದೆ. ಉತ್ತರ ಕೇಳಿದ ನಂತರ ಮಾನ್ಯ ಸದಸ್ಯರು ತಮ್ಮ ಪ್ರತಿಕ್ರಿಯೆ ಕೊಡಲಿ. ಆದರೆ ಸರ್ಕಾರ ಉತ್ತರ ಕೊಡುವವರೆಗೆ ತಾವೆಲ್ಲರೂ ತಾಳ್ಮೆಯಿಂದ ಕೇಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

1. **ಲ್ಯಾಪ್‌ಟಾಪ್ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸದನ ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿ ವಿರೋಧ ಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ ಮತ್ತು ಚರ್ಚೆ.**

.....

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆ ಲ್ಯಾಪ್‌ಟಾಪ್ ಬಗ್ಗೆ ಸುದೀರ್ಘವಾದ ಚರ್ಚೆ ಆದನಂತರ ಉಪಮುಖ್ಯಮಂತ್ರಿಗಳು ನಮಗೆ ಲಿಖಿತ ಉತ್ತರ ಕೊಟ್ಟಿದ್ದಾರೆ. ನಮ್ಮ ಮುಖ್ಯ ಬೇಡಿಕೆ ಸದನ ಸಮಿತಿ ರಚನೆ ಮಾಡಬೇಕು ಎನ್ನುವುದಾಗಿತ್ತು. ರೂ.14490/- ಬೆಲೆಯ ಕಂಪ್ಯೂಟರನ್ನು ರೂ.28 ಸಾವಿರಕ್ಕಿಂತ ಹೆಚ್ಚು ಮೊತ್ತ ಕೊಟ್ಟು ಖರೀದಿ ಮಾಡಿದ್ದಾರೆ. ನಾವು 39 ಸಾವಿರ ಕಂಪ್ಯೂಟರ್‌ಗಳನ್ನು ಖರೀದಿ ಮಾಡಿದ್ದೆವು. ಇವರು ಸುಮಾರು 1 ಲಕ್ಷ 10 ಸಾವಿರ ಕಂಪ್ಯೂಟರ್‌ಗಳನ್ನು ಖರೀದಿ ಮಾಡಿದ್ದಾರೆ. ಅದೂ ಡಬ್ಬಲ್ ರೇಟ್‌ಗೆ ಖರೀದಿ

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡಿದ್ದಾರೆ. ಹಿಂದಿನ ಕಾಂಗ್ರೆಸ್ ಪಕ್ಷ ನೇತೃತ್ವದ ಸರ್ಕಾರ ಸುಮಾರು ರೂ.14490/-ಗಳನ್ನು ಕೊಟ್ಟು ಕಂಪ್ಯೂಟರ್ ಖರೀದಿ ಮಾಡಿದಾಗ ಇದೇ ಸದನದಲ್ಲಿ ಇವರೇ ಚರ್ಚೆ ಮಾಡಿ, ಸದನ ಸಮಿತಿ ನೇಮಕ ಮಾಡಬೇಕೆಂದು ಕೇಳಿದ್ದರು. ನಮ್ಮದು ಎಲ್ಲವೂ ಪಾರಕರ್ಶಕವಾಗಿತ್ತು. ನಾವು ಸದನ ಸಮಿತಿ ಮಾಡುವುದಕ್ಕೆ ಒಪ್ಪಿದ್ದೆವು. ರೂ.14490/- ಬೆಲೆಯ ಕಂಪ್ಯೂಟರನ್ನು ಸುಮಾರು ರೂ.28000/- ಬೆಲೆಗೆ ಇವರು ಖರೀದಿ ಮಾಡಿರುವುದರಿಂದ ಇದರಲ್ಲಿ ಸುಮಾರು ರೂ.155 ಕೋಟಿಗಳಷ್ಟು ಭ್ರಷ್ಟಾಚಾರ ಆಗಿದೆ. ಇದನ್ನು ನಮ್ಮ ಎಲ್ಲಾ ಸದಸ್ಯರು ನೇರವಾಗಿ ಹೇಳಿದ್ದಾರೆ. ನಮ್ಮ ಎಲ್ಲಾ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷದ ಸದಸ್ಯರು ಸದನ ಸಮಿತಿ ರಚನೆ ಮಾಡಬೇಕು ಎಂದು ಕೇಳಿದಾಗ ಸರ್ಕಾರ ಈ ಕುರಿತು ಲಿಖಿತ ಉತ್ತರ ಕೊಟ್ಟಿದೆ. ಆದರೆ ಮತ್ತೆ ಇದರ ಬಗ್ಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಸರ್ಕಾರ ಸದನ ಸಮಿತಿ ರಚನೆ ಮಾಡುತ್ತದೆ ಎಂದು ಒಪ್ಪಿಕೊಂಡರೆ ನಮ್ಮ ಸದಸ್ಯರು ಬಾವಿಯಿಂದ ಹೊರಗೆ ಬರುತ್ತಾರೆ. ಈ ಕುರಿತು ಮತ್ತೆ ಯಾವುದೇ ಚರ್ಚೆಯ ಅವಶ್ಯಕತೆ ಇರುವುದಿಲ್ಲ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ಕೊಟ್ಟ ನಂತರ ವಿರೋಧ ಪಕ್ಷದ ಸದಸ್ಯರು ತಮ್ಮ ಪ್ರತಿಕ್ರಿಯೆಯನ್ನು ಕೊಡಲಿ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಸದನ ಸಮಿತಿ ರಚನೆ ಮಾಡುವುದಕ್ಕೆ ತಯಾರಿದೆಯೋ ಇಲ್ಲವೋ ಹೇಳಬೇಕು.

(ಗೊಂದಲ)

**ಶ್ರೀ ಸಿ.ಟಿ.ರವಿ:-** ಇದು, ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿದ ಕತೆಯ ಹಾಗೆ ಇದೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ವಿರೋಧ ಪಕ್ಷದ ಸದಸ್ಯರು ಅವಕಾಶ ಮಾಡಿಕೊಡಬೇಕು.

ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ‘ಕೋತಿ ತಾನು ತಿಂದು ಮೇಕೆ ಬಾಯಿಗೆ ಒರೆಸಿತಂತೆ’ ಎಂದು ಹೇಳುತ್ತಿದ್ದಾರೆ. ನಿಮಗೆ ಇದು ಇನ್ನೂ ಅರ್ಥವಾಗಿಲ್ಲವೇ?

(ಗೊಂದಲ)

**ಸಭಾಪತಿಯವರು:–** ಸದನವನ್ನು ಬೆಳಿಗ್ಗೆ 11.30 ಗಂಟೆಯ ತನಕ ಮುಂದೂಡುತ್ತಿದ್ದೇನೆ.

(696)24–03–2020(11–40)ಎಂವಿ–ಎಕೆ

**(ಬೆಳಗ್ಗೆ 11 ಗಂಟೆ 04 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ 11 ಗಂಟೆ 40 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್)ನ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

**ಡಾ||ಸಿ.ಎನ್.ಅಶ್ವತ್ಥ ನಾರಾಯಣ(ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಕೆ.ಸಿ.ಕೊಂಡಯ್ಯ ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಗಮನವನ್ನು ಸೆಳೆದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮ ವಿಚಾರವಿದೆ. ಈ ಲ್ಯಾಪ್‌ಟಾಪ್‌ಗೆ 14,000/– ರೂಪಾಯಿಗಳು ಇದ್ದಾಗ ನಾವು ಸದನ ಸಮಿತಿಯನ್ನು ಮಾಡಿದ್ದೆವು. ಇವರು ಸದನ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿದ್ದಾರೋ? ಅವರು ಒಪ್ಪಿದರೆ they will come out of the well.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–**ಮಾನ್ಯ ಸಭಾಪತಿಯವರೇ, ಅವರು ಮಾಡಿರುವಂತಹ ಅನಾಹುತಕ್ಕೆ ನಮ್ಮನ್ನು ಏಕೆ ದೂರುತ್ತಾರೆ. ಇದು ಅವರ ಸರ್ಕಾರ, ಅವರ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿಗಳು ಇದ್ದಾಗ ಆಗಿರುವಂಥದ್ದು.

**(ಗೊಂದಲ)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ||ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, 2016-17ರಲ್ಲಿ ಅಂದಿನ ಸರ್ಕಾರದಲ್ಲಿ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು tender procurement ಮಾಡುತ್ತಾರೆ. ಸುಮಾರು 25 ಸಾವಿರ computer ಗಳನ್ನು procure ಮಾಡುತ್ತಾರೆ. ಆ ದಿನ procure ಮಾಡಿದಾಗ...

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಸದಸ್ಯರುಗಳು ಸರ್ಕಾರದ ವಿರುದ್ಧ ಧಿಕ್ಕಾರ ಮತ್ತು ಬೇಕೆ ಬೇಕು ಸದನ ಸಮಿತಿ ಆಗಬೇಕು ಎಂಬ ಘೋಷಣೆಗಳನ್ನು ಕೂಗಿದರು)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಮಾಡುತ್ತೇವೆಂದರೆ, ನಾವು ಸದನದ ಬಾವಿಯಿಂದ ಹೊರಗೆ ಬರುತ್ತೇವೆ. ಈಗ ಇದಕ್ಕೆ ಸದನ ಸಮಿತಿ ಮಾಡುವುದಿಲ್ಲವೆಂದರೆ ಏನು? ನಮಗೆ ಇವರ clarification and explanation ಏನೂ ಬೇಡ. We want formation of a House Committee.

**(ಗೊಂದಲ)**

**ಡಾ||ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, 14,900/- ರೂಪಾಯಿಗಳಿಗೆ ಸುಮಾರು 25 ಸಾವಿರ computer ಗಳನ್ನು procure ಮಾಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಸಮಿತಿ ಆಗಬೇಕು. ನಮಗೆ ಇನ್ನೇನು demand ಇಲ್ಲ. ನಮಗೆ written reply ಬಂದಿದೆ. ಆದುದರಿಂದ ಅವರ clarification ಅವಶ್ಯಕತೆ ಇಲ್ಲ.

**(ಗೊಂದಲ)**

**ಡಾ||ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, computer ಗಳನ್ನು ಕೊಂಡುಕೊಳ್ಳಬೇಕೆಂದು tender call for ಮಾಡುತ್ತಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri S.R. PATIL:** A House Committee is needed. We are pressing for formation of a House Committee.

**(ಗೊಂದಲ)**

**ಡಾ||ಸಿ.ಎನ್.ಅಶ್ವತ್ಥ ನಾರಾಯಣ:–** ಆಗ ಯಾವುದೇ ರೀತಿಯ ಪ್ರಕ್ರಿಯೆ ಮತ್ತು tender ನಲ್ಲಿ participate ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ definitely ದುರುಪಯೋಗವಾಗಿದೆ. ಇದಕ್ಕೆ ಸದನ ಸಮಿತಿ ಮಾಡಲಿ ಎಂದು ಒತ್ತಾಯ ಮಾಡುತ್ತೇವೆ.

**(ಗೊಂದಲ)**

**ಡಾ||ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಸಭಾಪತಿಯವರೇ, ಹಾಗಾಗಿ ಇದು ನಿಂತು ಹೋಗುತ್ತದೆ. ತದನಂತರ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಆ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ, ಸಮ್ಮಿಶ್ರ ಸರ್ಕಾರದಲ್ಲಿ...

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇಂತಹ ಭಂಡ ಮತ್ತು ಭ್ರಷ್ಟ ಸರ್ಕಾರವನ್ನು ನನ್ನ ಬದುಕಿನಲ್ಲೇ ನೋಡಿಲ್ಲ.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 1.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(697)24.03.2020/1.10/ವೈಎಲ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**(11 ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 1 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ವಿರೋಧ ಪಕ್ಷಗಳ ಸದಸ್ಯರುಗಳೆಲ್ಲರೂ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

## 2. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ರ ನಿಯಮದ ಮೇರೆಗೆ ವಿಧಾನಸಭೆಯಿಂದ ದಿನಾಂಕ: 24.03.2020 ರಂದು ಈ ಕೆಳಕಂಡ ವಿಧೇಯಕವನ್ನು ಅಂಗೀಕರಿಸಲಾಗಿರುತ್ತದೆ ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತು ಸಹಮತಿ ನೀಡಬೇಕೆಂದು ಕೋರಿರುತ್ತಾರೆ:

- ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2020
- ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2020

**(ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರೆಲ್ಲರೂ ಬಾವಿಯಲ್ಲಿ ನಿರತರಾಗಿದ್ದು, ಲ್ಯಾಪ್‌ಟಾಪ್ ಖರೀದಿಯಲ್ಲಿ ರೂ.300 ಕೋಟಿ ಹಗರಣವಾಗಿರುವ ಕುರಿತು ಸದನ ಸಮಿತಿ ರಚಿಸುವಂತೆ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:-** 'ಕೋವಿಡ್-19' ಸೋಂಕಿನ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಲು ಸದನಕ್ಕೆ ಬಂದಿದ್ದಾರೆ.

(ಮುಂದು) . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(698)/24.03.2020/1.20/ಎಸ್‌ಕೆ-ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**(ವಿರೋಧ ಪಕ್ಷದ ಸದಸ್ಯರೆಲ್ಲರೂ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು.)**

**ಡಾ॥ ಅಶ್ವತ್ಥ ನಾರಾಯಣ ಸಿ.ಎನ್.(ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಕೋವಿಡ್-19 ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದವರಿಗೆ ನಾನು ವಿನಂತಿ ಮಾಡುವುದೇನೆಂದರೆ, ಮಾನ್ಯ ಸಚಿವರು ಉತ್ತರ ಕೊಡುವಾಗ ಇವತ್ತು ಕೊರೊನಾ ವೈರಸ್ ಬಗ್ಗೆ ರಾಜ್ಯದ ಜನರಿಗೆ ಸಂದೇಶ ಹೋಗಬೇಕು. ರಾಜ್ಯದಲ್ಲಿರುವ ಜನರಿಗೆ ಕೊರೊನಾದ ಬಗ್ಗೆ ಆತಂಕವಾಗಿದೆ. ದಯವಿಟ್ಟು, ಇದರ ಬಗ್ಗೆ ಸ್ವಲ್ಪ ಕೇಳಿ.

**ಸಭಾಪತಿಯವರು:-** ದಯವಿಟ್ಟು, ಒಂದು ನಿಮಿಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ಕೇಳಿ. ಮಾನ್ಯ ಐವನ್ ಡಿ'ಸೋಜಾರವರಿಗೆ ಸ್ವಲ್ಪ ಹೇಳಿ. ಸರ್ಕಾರದ ಪರವಾಗಿ ಕೊರೊನಾದ ಬಗ್ಗೆ ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಒಂದು ನಿಮಿಷ. ಈಗ ಕೋವಿಡ್-19 ಬಗ್ಗೆ ನಿಯಮ 68 ರಡಿ ಪರಿವರ್ತನೆ ಮಾಡಿ ಅದಕ್ಕೆ ಉತ್ತರವನ್ನು ಸರ್ಕಾರದಿಂದ ಕೊಡಬೇಕಾಗಿತ್ತು. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಮತ್ತು ವಿರೋಧ ಪಕ್ಷದ ನಾಯಕರು ಕೇಳಿರುವಂತಹ ಪ್ರಶ್ನೆ ಏನಿದೆಯೋ, ಅದಕ್ಕೆ ತಾಳೆ ಆಗುತ್ತದೆಯೋ ನೋಡಿ? ಏಕೆಂದರೆ, ಇದು ಗಂಭೀರವಾದ ವಿಚಾರವಾಗಿದೆ. ಮಾನ್ಯ ವಿರೋಧ ಪಕ್ಷದವರು ಕೇಳಿರುವಂತಹ ಪ್ರಶ್ನೆಗೆ ಕನಿಷ್ಠ ಉತ್ತರ ಕೊಡುವಂತಹ ಪ್ರಯತ್ನ ಮಾನ್ಯ ಸಚಿವರು ಮಾಡಬೇಕಾಗಿದೆ. ಮಾನ್ಯ ಸಚಿವರು ಪ್ರಶ್ನೆ ನೋಡಿಲ್ಲವೆಂಬುದು ಕಾಣಿಸುತ್ತದೆ. ಅದನ್ನು ನೋಡಿದ್ದರೆ, ಈ ರೀತಿಯ ಉತ್ತರ ಕೊಡುತ್ತಿರಲಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಸದನದಲ್ಲಿ ನಮ್ಮ ಇಬ್ಬರು ಮಂತ್ರಿಗಳು ಇದ್ದಾರೆ. ಮಾನ್ಯ ಸಚಿವರು ರಾಜ್ಯದ ಜನರಿಗೆ ಸಮರ್ಪಕವಾಗಿ ಉತ್ತರವನ್ನು ಕೊಡುತ್ತಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಇದರಲ್ಲಿ ಏನು ಕೇಳಿದ್ದಾರೋ, ಅದು Adjournment Motion ನಲ್ಲಿ ಬಂದಿರುವಂತಹದ್ದು. ಅದು ನಿಯಮ 68 ಕ್ಕೆ ಪರಿವರ್ತನೆಯಾಗಿರುವುದು. ಅವರು ಕೇಳಿರುವಂತಹದ್ದಕ್ಕೆ, ಈ ರಾಜ್ಯದ ಜನರಿಗೆ ಉತ್ತರವನ್ನು ಕೊಟ್ಟರೆ ಸಾಕು. ಇದರಲ್ಲಿ ಬೇರೆ ಯಾವುದೇ ಉದ್ದೇಶವಿಲ್ಲ. ಇದು ಸರ್ಕಾರದ ಗಮನ ಸೆಳೆಯುವಂತಹ ಪ್ರಯತ್ನವಾಗಿದೆ. ಮಾನ್ಯ ಸಚಿವರು ತಾವು ಉತ್ತರ ಕೊಡುವುದಕ್ಕೆ ಇನ್ನೂ one hour time ಇದೆ. ಒಂದು ಗಂಟೆಯಲ್ಲಿ ಉತ್ತರ ಕೊಟ್ಟರೆ ಸಾಕು.

**ಶ್ರೀ ಪಿ.ಆರ್. ರಮೇಶ್(ನಾಮ ನಿರ್ದೇಶನವನ್ನು ಹೊಂದಿದವರು):–** ಇನ್ನೂ ಉತ್ತರ ಬಂದಿಲ್ಲ.

**ಡಾ|| ಅಶ್ವತ್ಥ ನಾರಾಯಣ ಸಿ.ಎನ್.:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಪ್ರತಿ ಪಕ್ಷದ ನಾಯಕರುಗಳು ಎತ್ತಿರುವಂತಹ ಪ್ರಶ್ನೆಗಳಿಗೆ ಉತ್ತರ ಕೊಡುವಂತಹದ್ದಾಗುತ್ತದೆ. ನಾವು ಸರ್ಕಾರದಿಂದ ಏನೊಂದು ಹೇಳಿಕೆಯನ್ನು...

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಬೇಕೇ ಬೇಕು ನ್ಯಾಯ ಬೇಕು ಎಂದು ಘೋಷಣೆಗಳನ್ನು ಕೂಗುತ್ತಿದ್ದರು.)**

**ಸಭಾಪತಿಯವರು:–** ಒಂದು ನಿಮಿಷ.

**ಡಾ|| ಅಶ್ವತ್ಥನಾರಾಯಣ ಸಿ.ಎನ್.:–** ನಾವು ಸರ್ಕಾರದಿಂದ ಕೋವಿಡ್–19 ಕಾಯಿಲೆಗೆ ತುತ್ತಾಗಿರುವ ಸಾರ್ವಜನಿಕರ ತುರ್ತು ವೈದ್ಯಕೀಯ ಸೇವೆಗೆ ಇಡೀ ರಾಜ್ಯ ಮಟ್ಟದಲ್ಲಿ, ತಾಲ್ಲೂಕುವಾರು, ಸರ್ಕಾರ . . . **(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರಾಜ್ಯದ ಜನರು ತುಂಬಾ ಆತಂಕದಲ್ಲಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಇದರ ಬಗ್ಗೆ ಚರ್ಚೆ ಮುಂದುವರೆಯುವುದು ಬೇಡವೇ? **(ಗೊಂದಲ)**ಮಾನ್ಯ ಹೆಚ್.ಎಂ.ರೇವಣ್ಣನವರೇ, ಸರ್ಕಾರದವರು ಇದಕ್ಕೆ ಉತ್ತರ ಕೊಡುವುದು ಬೇಡವೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಹಲವು ಬಾರಿ ಹೇಳಿದ್ದೇವೆ. ಇದು ಲ್ಯಾಪ್‌ಟಾಪ್ ಹಗರಣಕ್ಕೆ ಸಂಬಂಧಿಸಿದಂತೆ ಸದನ ಸಮಿತಿ ಮಾಡತ್ತೇವೆಂದು ಹೇಳಿದರೆ ನಮ್ಮದೇನೂ ಅಭ್ಯಂತರವಿಲ್ಲ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ಕೊರೊನಾದ ಬಗ್ಗೆ ಉತ್ತರ ಕೊಡುವುದಾದರೆ ಸಮಯವನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಇದಕ್ಕೆ ಉತ್ತರ ಕೊಡುವುದಾದರೆ, ಈಗಲೇ ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಆರೋಗ್ಯ ಸಚಿವರೇ ನೋಡಿ. ತಾವು ಕೊರೊನಾದ ಬಗ್ಗೆ ಹೇಳಿಕೆಯನ್ನು ಕೊಡಿ. **(ಗೊಂದಲ)** ಕೊರೊನಾದ ಬಗ್ಗೆ ಹೇಳಿಕೆ ಕೊಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಮಾನ್ಯ ಸಭಾಪತಿಯವರೇ, ಲ್ಯಾಪ್‌ಟಾಪ್ ವಿಚಾರವಾಗಿ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಕೇಳಿದ್ದೇವೆ. ಸರ್ಕಾರದವರು ಸಮಿತಿ ರಚನೆ ಮಾಡುತ್ತಾರೋ ಇಲ್ಲವೋ ಎನ್ನುವ ಮಾತು ಅವರು ಹೇಳಲಿ.ಆದರೆ ಕೊರೊನಾದ ಬಗ್ಗೆ ಹೇಳಿಕೆ ಕೊಡಲಿ. **(ಗೊಂದಲ)** ಕೊರೊನಾದ ಬಗ್ಗೆ ಹೇಳಿಕೆ ಕೊಡುತ್ತಾರೆ ಸ್ವಲ್ಪ ಶಾಂತಿಯಿಂದ ಇರಿ.

**(ಗೊಂದಲ)**

**ಸಭಾಪತಿಯವರು:–** ಕೊರೊನಾ ವೈರಸ್ ಬಗ್ಗೆ ಹೇಳಿಕೆ ಕೊಡುತ್ತಾರೆ. ಅದನ್ನು ತಾಳ್ಮೆಯಿಂದ ಕೇಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಯಿತು. ಕೊರೊನಾದ ಬಗ್ಗೆ ಅವರು ಹೇಳಿಕೆ ಕೊಡಲಿ. ನಾವು ಈಗಾಗಲೇ ಅದನ್ನು . . .

**ಸಭಾಪತಿಯವರು:–** ತಾವು ಉತ್ತರ ಕೊಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ನಿಯಮ 68 ರಡಿಯಲ್ಲಿ ಕೊರೊನಾದ ಬಗ್ಗೆ ಹೇಳಿಕೆಯನ್ನು ನಾವು ಸ್ವೀಕಾರ ಮಾಡುವುದಕ್ಕೆ ತಯಾರಿದ್ದೇವೆ. ಸರ್ಕಾರದವರು ಏನು ಹೇಳುತ್ತಾರೋ ನೋಡೋಣ. ಕೊರೊನಾ ಬಗ್ಗೆ ನಮ್ಮದೇನೂ ಅಭ್ಯಂತವಿಲ್ಲ. **(ಗೊಂದಲ)** ಸರ್ಕಾರದವರು ಸದನ ಸಮಿತಿ ರಚನೆ ಮಾಡುತ್ತಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅಷ್ಟೇ ಹೇಳಿ ಸಾಕು, that is enough. **(ಗೊಂದಲ)** ಮಾನ್ಯ ಆರೋಗ್ಯ ಸಚಿವರು ಕೊರೊನಾದ ಬಗ್ಗೆ ಉತ್ತರ ಹೇಳುತ್ತಾರೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನವನ್ನು ಹೊಂದಿದವರು):-** ತಾವು ಈ ವಿಷಯವನ್ನು ಮಂಡಿಸುವುದಕ್ಕೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಆಯಿತು. **(ಗೊಂದಲ)** ಮಾನ್ಯ ಹೆಚ್.ಎಂ.ರೇವಣ್ಣನವರೇ, ಮಾನ್ಯ ಸಚಿವರು ಕೊರೊನಾದ ಬಗ್ಗೆ ಹೇಳಿಕೆ ಕೊಡುವುದಾದರೆ, ಅವರು ಕೊಡಲಿ.

**ಸಭಾಪತಿಯವರು:-** ಉತ್ತರದ ಪ್ರತಿಯನ್ನು ಕೊಡಿ.

**3. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.**

**ರಾಜ್ಯಾದ್ಯಂತ ಕೋವಿಡ್-19 ಕೊರೋನ ವೈರಸ್ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು.**

........

**ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಸುಮಾರು 32 ಪಾಸಿಟಿವ್ ಕೇಸ್‌ಗಳಿವೆ. ಇದರಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಬೆಂಗಳೂರು ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಸುಮಾರು 24 ಪಾಸಿಟಿವ್ ಕೇಸ್‌ಗಳಾಗಿವೆ. ಅದರಲ್ಲಿ ಕಲ್ಬುರ್ಗಿ ಜಿಲ್ಲೆಯಲ್ಲಿ ಮೂರು ಪಾಸಿಟಿವ್ ಕೇಸ್‌ಗಳು, ಚಿಕ್ಕಬಳ್ಳಾಪುರದಲ್ಲಿ ಮೂರು ಪಾಸಿಟಿವ್ ಕೇಸ್‌ಗಳು, ಮೈಸೂರಿನಲ್ಲಿ ಎರಡು ಪಾಸಿಟಿವ್ ಕೇಸ್‌ಗಳು, ಕೊಡಗು ಜಿಲ್ಲೆಯಲ್ಲಿ ಒಂದು ಪಾಸಿಟಿವ್ ಕೇಸ್, ಧಾರವಾಡ ಜಿಲ್ಲೆಯಲ್ಲಿ ಒಂದು ಪಾಸಿಟಿವ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಸ್. ಮಂಗಳೂರು ಜಿಲ್ಲೆಯಲ್ಲಿ ಒಂದು ಪಾಸಿಟಿವ್ ಕೇಸ್. ಉತ್ತರ ಕನ್ನಡ ಜಿಲ್ಲೆಯ ಎರಡು ಪಾಸಿಟಿವ್ ಕೇಸ್ ಇರುವ ಕಾರಣ ಇವತ್ತಿನ ತನಕ ಸುಮಾರು 37 ಪಾಸಿಟಿವ್ ಕೇಸ್‌ಗಳಾಗಿವೆ. ಇಲ್ಲಿಯವರೆಗೂ ಕರ್ನಾಟಕ ರಾಜ್ಯದಲ್ಲಿ ಬಂದರು ಪ್ರದೇಶಗಳಲ್ಲಿ ಆಗಿರಬಹುದು, ಏರ್‌ಪೋರ್ಟ್‌ಗಳಲ್ಲಿ ಆಗಿರಬಹುದು, ಸುಮಾರು ಒಂದು ಲಕ್ಷದ ಮೂವತ್ತು ಸಾವಿರ ಜನರಿಗೆ ಇಲ್ಲಿಯವರೆಗೂ thermal scanning ಮಾಡಲಾಗಿದೆ. ಈ ರಾಜ್ಯದಲ್ಲಿ ಸುಮಾರು ಹನ್ನೆರಡೂವರೆ ಸಾವಿರ ಜನರನ್ನು observation ಮಾಡಲಾಗುತ್ತಿದೆ. ಒಟ್ಟು 173 ಜನರನ್ನು Isolation Ward ನಲ್ಲಿಟ್ಟಿದ್ದೇವೆ. ಒಟ್ಟಾರೆಯಾಗಿ ಸುಮಾರು 1477 ಜನರ swab samples collect ಮಾಡಿಕೊಂಡು ಪರೀಕ್ಷೆ ಮಾಡಿದ ನಂತರ ಬಂದ ವರದಿಯ ಪ್ರಕಾರ ಸುಮಾರು 1153 ಜನರಿಗೆ ನೆಗೆಟಿವ್ ಬಂದಿದೆ. ಇನ್ನೂ ಸುಮಾರು 324 ಜನರ ರಿಪೋರ್ಟ್ ಬರಬೇಕಾಗಿದ್ದು, ಅದಕ್ಕಾಗಿ ಕಾಯುತ್ತಿದ್ದೇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೊರೊನಾ ಸೋಂಕಿನ ಬಗ್ಗೆ ಎಲ್ಲಾ ರೀತಿಯ ಕಠಿಣವಾದ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಕಳೆದ ದಿನಾಂಕ 14.03.2020 ರಿಂದ ರಾಜ್ಯದಾದ್ಯಂತ ಎಲ್ಲಾ ಪಬ್, ಮಾಲ್, ಚಿತ್ರಮಂದಿರಗಳು, ಕ್ರೀಡಾ ಚಟುವಟಿಕೆ, ಸಾಮೂಹಿಕ ಪ್ರಾರ್ಥನಾ ಮಂದಿರಗಳು, ಸಮ್ಮರ್ ಕ್ಯಾಂಪ್ಸ್, ಸ್ವಿಮ್ಮಿಂಗ್ ಪೂಲ್ಸ್, ಜಾತ್ರೆಗಳು, ಉತ್ಸವಗಳು ಎಲ್ಲವನ್ನೂ ನಿಷೇಧ ಮಾಡುವಂತಹ ಕೆಲಸವನ್ನು ಕೂಡ ಮಾಡಲಾಗಿದೆ. ಇಂದಿನಿಂದ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳನ್ನು ಲಾಕ್‌ಡೌನ್ ಮಾಡುವಂತಹ ಘೋಷಣೆ ಮಾಡಲಾಗಿದೆ. ಇಂದಿನಿಂದ ಅಂದರೆ ದಿನಾಂಕ 24.03.2020 ರಿಂದ 30.03.2020 ರ ತನಕ ಅಗತ್ಯ ಸೇವೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಸೇವೆಗಳನ್ನು ಬಂದ್ ಮಾಡುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಎಂ.ಟಿ.ಸಿ.ಬಸ್‌ಗಳ ಸೇವೆಗಳನ್ನು ಕೂಡ ಬಂದ್ ಮಾಡಲಾಗಿದೆ.ಕೇಂದ್ರ ಸರ್ಕಾರವು ದೇಶದಾದ್ಯಂತ ಎಲ್ಲಾ ರೈಲುಗಳ ಸೇವೆಯನ್ನು ಬಂದ್ ಮಾಡಿದೆ. ಕೊರೊನಾ ವೈರಸ್‌ನ್ನು ಎದುರಿಸಲು ಒಂದು Task Force ಅನ್ನು ರಚನೆ ಮಾಡಲಾಗಿದೆ. ಇದಕ್ಕೆ ಅಧ್ಯಕ್ಷರಾದಂತಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳಾದ ಅಂದರೆ, ನನ್ನ ನೇತೃತ್ವದಲ್ಲಿ ಉಪ ಮುಖ್ಯಮಂತ್ರಿಯಾದ ಡಾ|| ಅಶ್ವತ್ಥ್‌ನಾರಾಯಣರವರು, ಗೃಹ ಸಚಿವರಾದ ಮಾನ್ಯ ಬಸವರಾಜ್ ಬೊಮ್ಮಾಯಿಯವರು, ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವರಾದ ಡಾ|| ಕೆ. ಸುಧಾಕರ್‌ರವರು ಮತ್ತು ಮುಖ್ಯ ಕಾರ್ಯದರ್ಶಿ ಮತ್ತು ಎಲ್ಲಾ ಆರೋಗ್ಯಾಧಿಕಾರಿಗಳೂ ಕೂಡ ಆ Task Force ನಲ್ಲಿದ್ದಾರೆ. ಒಂದು War Room ಎಂದು ಹೇಳಿ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಇಪ್ಪತ್ನಾಲ್ಕು ತಾಸುಗಳು ಅದರ ಸೇವೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲಭಿಸಬೇಕೆಂಬ ಉದ್ದೇಶದಿಂದ, ನಿನ್ನೆ ನಾನು War Room ಉದ್ಘಾಟನೆಯನ್ನು ಮಾಡಿದ್ದೇನೆ. ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಒಂದು War Room ಮಾಡಿದ್ದೇವೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಬಿ. ಶ್ರೀರಾಮುಲು:-**ನಾನು conclude ಮಾಡಿ, ಸಂಪೂರ್ಣವಾದ ಮಾಹಿತಿಯನ್ನು ಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು conclude ಮಾಡುವುದಕ್ಕೆ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಏನಾದರೂ ಇದ್ದರೆ, ಅದನ್ನು ಮತ್ತೆ ಕೇಳಲಿ. ಮಾನ್ಯ ಸಚಿವರು ಖುದ್ದಾಗಿ ಹೇಳಿಕೆಯನ್ನು ನೀಡುತ್ತಿದ್ದಾರೆ. ...

**(ಗೊಂದಲ)**

**ಶ್ರೀ ಬಿ. ಶ್ರೀರಾಮುಲು:-** ಮೊದಲು ಬಾಲಬ್ರೂಯಿ ಅತಿಥಿ ಗೃಹದಲ್ಲಿ ಇರುವುದನ್ನು ಕ್ಯಾನ್ಸಲ್ ಮಾಡಿ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಮಾಡಿದ್ದಾರೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(699)24.3.2020/1.30/ಎಂ.ಎಂ-ಬಿ.ಎಸ್.ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಹೇಳುವುದೇ ಬೇರೆ, ಇಲ್ಲಿ ಉತ್ತರ ಕೊಡುವುದೇ ಬೇರೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಉತ್ತರದಲ್ಲಿ ಉಪ ಮುಖ್ಯಮಂತ್ರಿಯವರಾದ ಡಾ॥ ಸಿ.ಎನ್. ಅಶ್ವಥ್ ನಾರಾಯಣ್‌ರವರು ಸಹಿ ಮಾಡಿದ್ದಾರೆ ಎಂದು ಬಾವಿಯಲ್ಲಿದ್ದ ಮಾನ್ಯ ಸದಸ್ಯರುಗಳು ಕೇಳುತ್ತಿದ್ದರು)**

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡಲಿ, ಆಮೇಲೆ ಅವರು ಏನನ್ನು ಪ್ರಸ್ತಾಪ ಮಾಡಿಲ್ಲ ಅದನ್ನು ಕೇಳಿ.

**ಡಾ: ಸಿ.ಎನ್. ಅಶ್ವಥ್ ನಾರಾಯಣ್(ಉಪ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಸನ್ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ 'ಟಾಸ್ಕ್ ಫೋರ್ಸ್' ನಿರ್ಮಾಣವಾಗಿದೆ. ನಮ್ಮ ಸದಸ್ಯರು ನಿಯಮ 68ರಲ್ಲಿ ಕೇಳಿರುವ ಪ್ರಶ್ನೆ ಕೋವಿಡ್-19 ಕಾಯಿಲೆಗೆ ತುತ್ತಾಗಿರುವ ಸಾರ್ವಜನಿಕರಿಗೆ ತುರ್ತು ವೈದ್ಯಕೀಯ ಸೇವೆ ನೀಡಲು ರಾಜ್ಯಮಟ್ಟದ, ಜಿಲ್ಲಾವಾರು, ತಾಲ್ಲೂಕುವಾರು ಯಾವ ರೀತಿಯ ಸಿದ್ಧತೆಯನ್ನು ಸರ್ಕಾರ ಮಾಡಿಕೊಂಡಿದೆ ಎಂದು ಕೇಳುತ್ತಿದ್ದಾರೆ.ಈ ವಿಚಾರದಲ್ಲಿ ಕೋವಿಡ್-19 ವೈರಸ್‌ನ್ನು ನಿಯಂತ್ರಣ ಮಾಡಬೇಕಾದರೆ, ಚಿಕಿತ್ಸೆ ಮಾಡಬೇಕಿದ್ದರೆ ಟಾಸ್ಕ್ ಫೋರ್ಸ್‌ನಲ್ಲಿ ಸಾಕಷ್ಟು ತಜ್ಞರ ಸಲಹೆಯನ್ನು ಪಡೆದುಕೊಳ್ಳಬೇಕು. ಈ ಸಂದರ್ಭದಲ್ಲಿ ರೆಗ್ಯುಲರ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಬಾರದು. ಏಕೆಂದರೆ, ಅಲ್ಲಿ ಸಾಮಾನ್ಯ ರೋಗಿಗಳು, ಬೇರೆ ಬೇರೆ ಕಾಯಿಲೆಗೆ ಬಂದಿರುವವರು ಮತ್ತು ಕೋವಿಡ್-19 ಸೋಂಕು ತಗುಲಿರುವವರು, ಸೋಂಕುರಹಿತರು ಎಲ್ಲರೂ ಒಂದೇ ಸ್ಥಳಕ್ಕೆ ಬಂದರೆ ಅಲ್ಲಿರುವಂತಹ ರೋಗಿಗಳಿಗೂ ಸಮಸ್ಯೆಯಾಗುತ್ತದೆ. ಅಲ್ಲಿಗೆ ಸೋಂಕಿತರು ಬರುವುದರಿಂದ ಹೊಸದಾಗಿ ಕಾಯಿಲೆ ಹರಡುತ್ತದೆ ಎನ್ನುವ ಸಲಹೆಯನ್ನು ಕೊಟ್ಟ ಕಾರಣ ಅದರ ಆಧಾರಿತವಾಗಿ ಈಗ ಎಲ್ಲಾ ಜಿಲ್ಲೆಗಳಲ್ಲಿಯೂ isolation hospital ಗಳು ಪ್ರತ್ಯೇಕವಾಗಿವೆ. Exclusively ಕೋವಿಡ್-19ಗೆ ಪ್ರಥಮ ಹಂತದಲ್ಲಿ ಒಂಭತ್ತು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿದ್ದೇವೆ. ಈಗ ಇದನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಣೆ ಮಾಡುವಂತಹದ್ದಾಗುತ್ತಿದೆ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಈ ವ್ಯವಸ್ಥೆಯನ್ನು ಕೊಡಬೇಕು, isolation facility, quarantining facility, fever clinics, ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ fever clinics ಮಾಡುವುದು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೂ particularly ಜ್ವರವನ್ನು screen ಮಾಡಿ ನೋಡುವುದಕ್ಕೆ ಈಗ ಎಲ್ಲರಿಗೂ ಸಲಹೆ ಸೂಚನೆಗಳನ್ನು ಕೊಡಲಾಗಿದೆ.ಈಗಿರುವಂತಹ regular facilities ಬಿಟ್ಟು ಪ್ರತ್ಯೇಕವಾಗಿ ವ್ಯವಸ್ಥೆಯನ್ನು ಮಾಡುವುದಕ್ಕೆ ಆದ್ಯತೆ ಕೊಟ್ಟಿದ್ದೇವೆ. ವೆಂಟಿಲೇಟರ್ಸ್ ಬಗ್ಗೆ ಹೇಳುವುದಾದರೆ, ಮಾನ್ಯ ಆರೋಗ್ಯ ಸಚಿವರು ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ದೇಶನ ಕೊಟ್ಟಿದ್ದರು; 30% of the total beds ಅನ್ನು ಮೀಸಲಿಡಬೇಕು, ಕೊರೋನಾ ರೋಗಿಗಳು ಬಂದರೆ ನಿಮ್ಮ ಆಸ್ಪತ್ರೆಗಳಲ್ಲಿ ಅವರನ್ನು ದಾಖಲು ಮಾಡಿಕೊಂಡು ಚಿಕಿತ್ಸೆ ಕೊಡಬೇಕೆಂದು ಸೂಚನೆಗಳನ್ನು ಕೊಟ್ಟಿದ್ದರು.ಈ ಮಾರ್ಗದರ್ಶನದಲ್ಲಿ ಈಗಾಗಲೇ ಎಲ್ಲಾ ಆಸ್ಪತ್ರೆಗಳು ಚಿಕಿತ್ಸೆಕೊಡುವುದನ್ನು ಮಾಡುತ್ತಿದ್ದವು. ಈಗ advise ಏನಿದೆ ಎಂದರೆ ಇವರಿಗೆ ಪ್ರತ್ಯೇಕವಾಗಿ ಚಿಕಿತ್ಸೆ ಕೊಡಬೇಕು. ಇಲ್ಲದಿದ್ದರೆ, ಇದು ತುಂಬಾ ವೇಗವಾಗಿ ಹರಡುವ ಕಾಯಿಲೆಯಾಗಿದೆ. ಬೇರೆ ಏನೋ ಕಾರಣಕ್ಕೆ ಆಸ್ಪತ್ರೆಗೆ ಬಂದಿರುವವರಿಗೆ ಮೊದಲೇ ಅವರಿಗೆ ಆರೋಗ್ಯ ಚೆನ್ನಾಗಿರುವುದಿಲ್ಲ;

**ಶ್ರೀ ಎಸ್.ಆರ್. ಪಾಟೀಲ್(ವಿರೋಧಪಕ್ಷದ ನಾಯಕರು):-** ಮಾನ್ಯ ಸಚಿವರೇ, ಶೇ.30 ರಷ್ಟು ಹಾಸಿಗೆಗಳನ್ನು ಮೀಸಲಿಡುವುದಕ್ಕೆ ಹೇಳಿದ್ದೀರಿ. ಅದು ಯಾವ್ಯಾವ ಆಸ್ಪತ್ರೆಗಳು ಎಂಬುದನ್ನು ತಿಳಿಸಿ.

**ಡಾ: ಸಿ.ಎನ್. ಅಶ್ವಥ್ ನಾರಾಯಣ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿಯೂ;

**ಶ್ರೀ ಎಸ್.ಆರ್. ಪಾಟೀಲ್:-** ಇಡೀ ರಾಜ್ಯದಲ್ಲಿ?

**ಡಾ: ಸಿ.ಎನ್. ಅಶ್ವಥ್ ನಾರಾಯಣ್:-** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿ ಮೀಸಲಿಟ್ಟಿದ್ದೇವೆ. ನಿಮ್ಮ ಕಾಳಜಿ ನಮಗೆ ಅರ್ಥವಾಗುತ್ತದೆ. ಯಾವ ರೀತಿ ವ್ಯವಸ್ಥೆ ಮಾಡಿದ್ದೇವೆ ಎಂಬುದನ್ನು ತಮ್ಮ ಜೊತೆ ಹಂಚಿಕೊಳ್ಳುತ್ತೇವೆ. ನೀವೇನಾದರೂ ಸಲಹೆ ಕೊಟ್ಟರೆ ಅದನ್ನು ಅನುಸರಿಸಿಕೊಳ್ಳುತ್ತೇವೆ. ಮುಖ್ಯವಾಗಿ ಈ ದಿಕ್ಕಿನಲ್ಲಿ ಜಿಲ್ಲಾ ಮಟ್ಟದಲ್ಲೂ ಟಾಸ್ಕ್ ಫೋರ್ಸ್‌ಗಳನ್ನು ಜಿಲ್ಲಾಧಿಕಾರಿಗಳು ಲೀಡ್ ಮಾಡುತ್ತಿದ್ದಾರೆ.ಅವರಿಗೆಲ್ಲರಿಗೂ ವೀಡಿಯೋ ಕಾನ್ಫರೆನ್ಸ್ ಮೂಲಕ ಸಾಕಷ್ಟು ಸೂಚನೆಗಳನ್ನು ಕೊಡಲಾಗಿದೆ.ಆ ದಿಕ್ಕಿನಲ್ಲಿ ಈಗಾಗಲೇ ಪ್ರತ್ಯೇಕವಾಗಿ isolation hospitals ಮತ್ತು quarantine ಮಾಡುವುದಕ್ಕೆ ವ್ಯವಸ್ಥೆಗಳನ್ನು ಮಾಡಿದ್ದಾರೆ.ಮೈಸೂರಿನಲ್ಲಿ 250 ಹಾಸಿಗೆಗಳನ್ನು ಮಾಡುವುದು, ಗುಲ್ಬರ್ಗಾದಲ್ಲಿ ಇ.ಎಸ್.ಐ. ಆಸ್ಪತ್ರೆಯನ್ನೇ ತೆಗೆದುಕೊಳ್ಳುವಂತಹ ಕೆಲಸ, ಶಿವಮೊಗ್ಗದಲ್ಲೂ ಕೂಡ ಪ್ರತ್ಯೇಕವಾದ ಆಸ್ಪತ್ರೆಗಳನ್ನು ಒದಗಿಸುವುದು, ಚಿಕ್ಕಬಳ್ಳಾಪುರದಲ್ಲಿ ಪ್ರತ್ಯೇಕವಾಗಿ 100 ಹಾಸಿಗೆಗಳ ಆಸ್ಪತ್ರೆಯನ್ನು ವ್ಯವಸ್ಥೆ ಮಾಡುವುದು, ಬೆಂಗಳೂರಿನಲ್ಲಿ ಸಂಪೂರ್ಣ 1700 ಹಾಸಿಗೆಗಳುಳ್ಳ ವಿಕ್ಟೋರಿಯಾ ಆಸ್ಪತ್ರೆಯನ್ನು exclusively isolation hospital ಆಗಿ ಮಾಡಬೇಕೆಂದು ಮಾಡಿರುವುದು, ಅದರ ಜೊತೆಯಲ್ಲಿ quarantine ಮಾಡುವುದಕ್ಕೆ 20,000 ಹೋಟೆಲ್ ಕೊಠಡಿಗಳನ್ನು ತೆಗೆದುಕೊಂಡು ಹೋಟೆಲ್ ರೂಂನಲ್ಲಿಯೇ quarantine ಮಾಡುವುದು ಮತ್ತು ಕೆಲವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

asymptomatic ಇರುತ್ತಾರೆ, ಅಂತಹವರಿಗೆ ಅವರವರ ಮನೆಯಲ್ಲಿಯೇ ಚಿಕಿತ್ಸೆ ಕೊಡುವುದಕ್ಕೆ ಅವಕಾಶ ಮಾಡಿ, ಇಡೀ ಕುಟುಂಬವನ್ನು ಮನೆಯಲ್ಲಿಯೇ exclusive ಆಗಿ ಅಲ್ಲಿಯೇ ಕ್ಲೋಸ್ ಮಾಡಿ ಅವರು ಹೊರಗಡೆ ಹೋಗದ ಹಾಗೆ ಅವರ ಮನೆಯ ಮೇಲೆ ನೋಟಿಸ್ ಒಂದನ್ನು ಅಂಟಿಸುವುದು; ಇದನ್ನು ಬೇರೆ ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ.ಪಂಜಾಬ್ ರಾಜ್ಯದಲ್ಲಿ ಮಾಡಿರುವ ಉದಾಹರಣೆ ಇದೆ.ಸೋಂಕಿತರು ಇರುವ ಯಾವುದಾದರೂ ಮನೆ ಇದ್ದರೆ ಅವರು asymptomatic ಇದ್ದರೂ ಸಹ ಅವರ ಮನೆಯ ಮೇಲೆ ಇಷ್ಟು ದಿನದಿಂದ ಇಷ್ಟು ದಿನದವರೆಗೂ ಅವರು isolation ನಲ್ಲಿರಬೇಕು ಎನ್ನುವಂತಹ ನೋಟಿಸ್ ಅನ್ನು ಸೋಂಕಿತ ವ್ಯಕ್ತಿ ಇರುವ ಮನೆಯ ಮೇಲೆ ಹಚ್ಚುವ ಕೆಲಸವನ್ನು ಮಾಡಿ ಈ ದಿನದಿಂದ ಈ ದಿನದವರೆಗೂ ಇವರು isolation ನಲ್ಲಿರಬೇಕು ಅಥವಾ quarantine ನಲ್ಲಿ ಇರಬೇಕೆಂಬ ಒಂದು ಸಾರ್ವಜನಿಕ ನೋಟಿಸ್ ಅನ್ನು ಅಂಟಿಸಲಾಗುವುದು.ಏಕೆಂದರೆ, ಅಕ್ಕ ಪಕ್ಕದ ಜನರಿಗೆ ಗೊತ್ತಿರುವುದಿಲ್ಲ. ಅವರು ಸಾಮಾನ್ಯವಾಗಿ ಆಚೆ ಹೋಗುವುದು, ಅಕ್ಕ ಪಕ್ಕದವರಿಗೆ ಸೋಂಕು ಹರಡಿಸುವುದು ಈ ಕೆಲಸಗಳಾಗಬಾರದು ಎಂದು ನೋಟಿಫೈ ಮಾಡಿ ಅವರವರ ಸೌಕರ್ಯ, ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವುದಕ್ಕು ಸಹ ವ್ಯವಸ್ಥೆ ಮಾಡಲಾಗಿದೆ. ಸುಮಾರು ಒಂದು ಲಕ್ಷ ಜನಸಂಖ್ಯೆಗೆ infection ಆಗಬಹುದೆಂದು prediction ಮಾಡಿದ್ದೇವೆ. ಒಂದು ಲಕ್ಷ ಜನರು infect ಆದರೆ ಎಷ್ಟು ಜನರಿಗೆ ಆಸ್ಪತ್ರೆಗಳನ್ನು ಒದಗಿಸುವುದಕ್ಕಾಗುತ್ತದೆ, 20 ಸಾವಿರ ಜನರ ಸಾಮರ್ಥ್ಯದ ಆಸ್ಪತ್ರೆಗಳಲ್ಲಿ ಸೌಕರ್ಯ ಒದಗಿಸುವುದು, 20 ಸಾವಿರದಲ್ಲಿ ಸುಮಾರು 2000 ಜನರಿಗೆ ವೆಂಟಿಲೇಟರ್ಸ್ ಬೇಕಾಗಬಹುದು. ವೆಂಟಿಲೇಟರ್ಸ್ ಬೇಕಾಗಿರುವ 2000 ಜನರಿಗೆ ಸೌಕರ್ಯ ಒದಗಿಸುವುದಕ್ಕೆ 2000 ವೆಂಟಿಲೇಟರ್‌ಗಳನ್ನು ಈ ದಿಕ್ಕಿನಲ್ಲಿ ತಯಾರು ಮಾಡುವುದು mobilise ಮಾಡುವುದನ್ನು ಮಾಡುತ್ತಿದ್ದೇವೆ. ಈಗಾಗಲೇ 1000 ವೆಂಟಿಲೇಟರ್ಸ್‌ಗೆ order place ಮಾಡಿದ್ದೇವೆ. ಸರ್ಕಾರದಲ್ಲಿ existing 300 ವೆಂಟಿಲೇಟರ್ಸ್ ಇದೆ, ಹೆಚ್ಚುವರಿಯಾಗಿ 1000 ವೆಂಟಿಲೇಟರ್ಸ್‌ಗೆ order place ಮಾಡಿದ್ದೇವೆ ಅದರ ಜೊತೆಯಲ್ಲಿ ಬೆಂಗಳೂರು ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳು ಅವರಲ್ಲಿರುವ 100 ವೆಂಟಿಲೇಟರ್‌ಗಳನ್ನು ನಮಗೆ ಒದಗಿಸಿದ್ದಾರೆ. ಬೇರೆ ಬೇರೆ ಜಿಲ್ಲಾ ಆಸ್ಪತ್ರೆಗಳಲ್ಲಿರುವ ವೆಂಟಿಲೇಟರ್‌ಗಳನ್ನು ಪಡೆದುಕೊಳ್ಳುತ್ತಿದ್ದೇವೆ, ಮತ್ತು Infosys ನವರು ನಮಗೆ 100 ವೆಂಟಿಲೇಟರ್‌ಗಳನ್ನು ಕೊಡುತ್ತಿದ್ದಾರೆ. ತುಂಬಾ ಜನರು ವೆಂಟಿಲೇಟರ್ಸ್ ರೀತಿ ಅದು ಇದು ಒದಗಿಸುವುದಕ್ಕೆ ಬೇರೆ ಬೇರೆ ಸಂಘಟನೆಗಳು, ಸಂಸ್ಥೆಗಳು ಮತ್ತು ಕಂಪನಿಗಳು ಮುಂದೆ ಬಂದಿವೆ. ಸರ್ಕಾರದಿಂದ ಈಗ ಹೆಚ್ಚುವರಿಯಾಗಿ 1000 ವೆಂಟಿಲೇಟರ್ಸ್‌ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

order place ಮಾಡಿದ್ದೇವೆ. 15 ಲಕ್ಷ three layer face masks ಗಾಗಿ ಹೆಚ್.ಎಲ್.ಎಲ್. ಸಂಸ್ಥೆಗೆ ಈಗಾಗಲೇ order place ಮಾಡಿದ್ದೇವೆ. 10 ಲಕ್ಷ PPE (Personal Protective Equipment) Kits ಗೆ order place ಮಾಡಿದ್ದೇವೆ. ಒಂದೊಂದು ರೋಗಿಯಿಂದ samples ತೆಗೆದುಕೊಳ್ಳಬೇಕಾದರೆ PPE Kit ಅನ್ನು ಧರಿಸಿಕೊಳ್ಳಬೇಕಾಗುತ್ತದೆ. ಆ PPE Kit ಗಳ ಅವಶ್ಯಕತೆ ಇರುವುದರಿಂದ 10 ಲಕ್ಷ PPE Kit ಗಳಿಗೆ order place ಮಾಡಿದ್ದೇವೆ ಮತ್ತು ಐದು ಲಕ್ಷ N95 ಮಾಸ್ಕ್‌ಗಳಿಗೆ order place ಮಾಡಿದ್ದೇವೆ. ಈ ರೀತಿ oxygen facility ಬೇರೆ ಎಲ್ಲಾ ಔಷಧಿ, prophylaxis ಆಗಿ Chloroquine ಮಾತ್ರೆಯನ್ನು ತೆಗೆದುಕೊಳ್ಳಬಹುದು ಎನ್ನುವುದನ್ನು ಈಗ ಒಂದು ಸೂಚನೆ ಇಟ್ಟುಕೊಂಡಿರುವ ಕಾರಣ ಅದನ್ನು procurement ಮಾಡುವುದಕ್ಕೆ ಎಲ್ಲಾ ಆಸ್ಪತ್ರೆಗಳಲ್ಲಿಯೂ ತಯಾರಿ ಮಾಡಿ prophylaxis ಆಗಿ Chloroquine ಮಾತ್ರೆಯನ್ನು ಪಡೆದುಕೊಳ್ಳುವುದಕ್ಕೂ ನಿರ್ದೇಶನ ಕೊಟ್ಟಿದ್ದೇವೆ. ಕೆಲವರು prophylaxis ಆಗಿವೈದ್ಯರ ಸಲಹೆಯ ಆಧಾರಿತವಾಗಿ ಏಕೆಂದರೆ 'ಕಿಡ್ನಿ' ತೊಂದರೆ ಇರುವಂತಹವರು Chloroquine ಮಾತ್ರೆಯನ್ನು ತೆಗೆದುಕೊಳ್ಳಬಾರದು. Indication, contraindication ಇರುತ್ತದೆ. ಅದನ್ನೆಲ್ಲಾ ನೋಡಿಕೊಂಡು ಆ ರೋಗಿಗಳಿಗೆ ಅಥವಾ ವ್ಯಕ್ತಿಗಳಿಗೆ prophylaxis ಆಗಿ Chloroquine ಮಾತ್ರೆಯನ್ನು ಕೊಡಬೇಕಾದರೆ ಮುನ್ನೆಚ್ಚರಿಕೆಯನ್ನು ವಹಿಸಬೇಕೆಂಬ ಸಲಹೆ ಸೂಚನೆಯ ಆಧಾರಿತವಾಗಿ ಮಾಡುವುದು ಮತ್ತು ಯಾವುದೇ ರೋಗಿಯು ನೇರವಾಗಿ ಆಸ್ಪತ್ರೆಗೆ ಬರಬಾರದು, ಏನಿದ್ದರೂ fever clinic ನ ವೈದ್ಯರ reference ಮೂಲಕವೇ ಬರಬೇಕು, ನೇರವಾಗಿ ಬಂದವರಿಗೆ, ಕಾಯಿಲೆ ಇಲ್ಲದಿದ್ದರೂ ಕಾಯಿಲೆ ಪಡೆದುಕೊಳ್ಳುವುದು, ಸೋಂಕಿತರಿಂದ uninfected person ಗೆ ಸೋಂಕು ಆಗುವುದು ಬೇಡ ಎನ್ನುವ ಕಾರಣಕ್ಕೋಸ್ಕರ ನಿರ್ದಿಷ್ಟವಾಗಿ ಪ್ರಾಥಮಿಕ ಹಂತದಲ್ಲಿಯೇ screening ಮಾಡುವಂತಹ ಕೆಲಸಗಳು ಕೆಲವು ಕಡೆ ವ್ಯವಸ್ಥೆಯಲ್ಲಿ ನಡೆಯುತ್ತಿದೆ, ಕೆಲವು ಕಡೆ temporary tents ಹಾಕಿ ಮಾಡಬೇಕೆಂದು; ಏಕೆಂದರೆ, ಟೆಂಟ್‌ಗಳನ್ನು ಏಕೆ ಹಾಕಬೇಕೆಂದರೆ, ಇರುವ ಕಡೆಯೇ ಮಾಡಿದರೆ ಅಲ್ಲಿ ಸೋಂಕು ಉಂಟಾದರೆ ಪುನಃ ರೋಗಿಗಳು ಬಂದಾಗ ಅವರು infection carry ಮಾಡುತ್ತಾರೆ ಎನ್ನುವ ಕಾರಣಕ್ಕಾಗಿ ಪ್ರತ್ಯೇಕವಾಗಿ temporary shelter ಮಾಡಿ ಅಲ್ಲಿಗೆ ಬೇಕಾಗಿರುವ ವೈದ್ಯರುಗಳನ್ನು mobilise ಮಾಡುವುದಾಗುತ್ತಿದೆ.ಮುಖ್ಯವಾಗಿ ಕೊರೋನಾ ಸೋಂಕಿಗೆ medicine ಎಂಬುದು ಇಲ್ಲ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

vaccine ಕಂಡು ಹಿಡಿಯುವುದಾಗುತ್ತಿದೆ. ಇದಕ್ಕೂ ಕೂಡ drugs ಆಗಿ Antiviral Therapy ಇರುವುದನ್ನು ಮಾಡುತ್ತಿದ್ದಾರೆ. ಈಗಿನ combination drugs ನಲ್ಲಿ ಈಗಿನ ಸೂಚನೆ, ಎಂದರೆ ಎಲ್ಲರೂ ಒಪ್ಪಿಕೊಂಡಿದ್ದಾರೆ ಎಂದು ಹೇಳುತ್ತಿಲ್ಲ.

(ಮುಂದು)

(700) 24-03-2020/ 01-40/ ಕೆಹೆಚ್-ಜಿಆರ್

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ಅಶ್ವತ್ಥನಾರಾಯಣ ಸಿ.ಎನ್ (ಮುಂದು):-**

ಇವತ್ತಿನ ದಿವಸ Hydroxychloroquine and azithromycin tablets combination ನಲ್ಲಿ ಇವತ್ತಿನ ದಿವಸ ಚಿಕಿತ್ಸೆ ಕೊಡುವಂತಹದ್ದು ಆಗುತ್ತಿದೆ. ಅದರಲ್ಲಿ ಒಳ್ಳೆಯ ರಿಸಲ್ಟ್ ಬಂದಿದೆ. ನ್ಯುಮೋನಿಯಾ ಇರುವಂತಹವರುresolveಆಗುತ್ತಿದ್ದಾರೆ. ಇದಕ್ಕೆ ಒಳ್ಳೆಯ response ಇದೆ ಎಂದು ಹೇಳುತ್ತಿದ್ದಾರೆ. ಹಾಗಾಗಿ ಇದನ್ನು adopt ಮಾಡಿ ಎಂದು ಹೇಳುವುದಿಲ್ಲ. ಅಲ್ಲಲ್ಲಿಯೇ ವೈದ್ಯರು ನೋಡಿ ಬೇಕಾಗಿರುವಂತಹ ಚಿಕಿತ್ಸೆ ಕೊಡುವಂತಹದ್ದು ಆಗುತ್ತಿದೆ. ಇಲ್ಲಿ ಮುಖ್ಯವಾಗಿ ಎಲ್ಲರೂ ಕೂಡ ಈ ಕಾಯಿಲೆಯ ಬಗ್ಗೆ ವರದಿಯಾಗಿರುವುದನ್ನು ನೋಡಿದ್ದೀರಾ?ನಮ್ಮ ರಾಜ್ಯದಲ್ಲಿ ವರದಿಯಾಗಿರುವಂತಹ ಪ್ರಕರಣಗಳಲ್ಲಿ ಯಾವುದೂ ವೆಂಟಿಲೇಟರ್‌ಗೆ ಹೋಗಿರುವಂತಹ ಪ್ರಕರಣಗಳು ಇಲ್ಲ. ಇದುವರೆಗೂ ವೆಂಟಿಲೇಟರ್ ಅವಶ್ಯಕತೆಗೆ ಬಂದಿರುವಂತಹ ಯಾವುದೂ patient ಇಲ್ಲ. ಎಲ್ಲರೂ ಸಾಮಾನ್ಯವಾಗಿ ಚಿಕಿತ್ಸೆಯಲ್ಲಿ ಇವತ್ತು ಕೋವಿಡ್-19 ಅನ್ನು infect ಆಗಿರುವಂತಹ ವ್ಯಕ್ತಿಗಳಿಗೆ secondary infection ಆಗದೇ ಇರುವ ಹಾಗೆ ನೋಡಿಕೊಳ್ಳುವುದು.ಏಕೆಂದರೆ, ಸಾಮಾನ್ಯವಾಗಿ infection ಬಂದ ತಕ್ಷಣ secondary infection or bacterial infection ಆಗುವಂತಹದ್ದು ಇರುತ್ತದೆ. ಹಾಗಾಗಿ ಈ secondary infection ಗೆ ಬೇಕಾಗಿರುವಂತಹ symptomatic treatment ಕೊಡುವುದಕ್ಕೆ ಈ anti-bacterial treatment ಅನ್ನು ಕೊಟ್ಟು ಏನೇನು complications ಉದ್ಭವವಾಗುತ್ತದೆ ಎಂಬುದನ್ನು ನೋಡಲಾಗುತ್ತದೆ. Hydration ಮಾಡುವಂತಹದ್ದು ಅವಶ್ಯವಿರುತ್ತದೆ.ತುಂಬಾ ಜನರಿಗೆ ಜ್ವರ ಬಂದಾಗ ಸರಿಯಾಗಿ ನೀರು ಸಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿಯುವುದಿಲ್ಲ. ಆಗ hydration ಬಹಳ ಮುಖ್ಯವಾಗಿರುತ್ತದೆ. Anti-bacterial treatment ನ್ನು ಕೊಡುವಂತಹದ್ದು, ಬೇರೆ ಬೇರೆ ರೀತಿಯ symptomatic treatment ನ್ನು ಕೊಡುವಂತಹ ಕಾರ್ಯಗಳೆಲ್ಲಾ ನಡೆಯುತ್ತಿವೆ. Infect ಆಗಿರುವಂತಹ patientಗಳಿಗೆ ಯಾರಿಗೂ ಕೂಡ . . .

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಖಾಸಗಿ ಆಸ್ಪತ್ರೆಗಳ ಬಗ್ಗೆ ಹೇಳಿದರು. ಅವರು ಎಷ್ಟು ಚಾರ್ಜ್ ಮಾಡುತ್ತಾರೆ. ಅದರ ಬಗ್ಗೆ ಏನಾದರೂ ನಿಗದಿ ಮಾಡಿದ್ದಾರೆಯೇ, ಈ ಚಾರ್ಜ್‌ನ್ನು ಯಾರು ಕೊಡುತ್ತಾರೆ, 20 ಸಾವಿರ ಹೋಟೆಲ್‌ಗಳನ್ನು ನಾವು ನೋಡಿದ್ದೇವೆ. Quarantineಗೆ ಹೋಟೆಲ್‌ಗಳನ್ನು ಇಡುವಂತಹ ವ್ಯವಸ್ಥೆ ಮಾಡುತ್ತೇವೆ. ಅದಕ್ಕೆ ದುಡ್ಡು ಕೊಡುವಂತಹವರು ಯಾರು? ಅದಕ್ಕೆ ಏನಾದರೂ ನಿಗದಿ ಮಾಡಿದ್ದೀರಾ.

**ಡಾ|| ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಇದಕ್ಕೆ ದುಡ್ಡು ಕೊಡುವಂತಹ ಪ್ರಶ್ನೆ ಇಲ್ಲ. ಉಚಿತವಾಗಿ ಚಿಕಿತ್ಸೆಯನ್ನು ಕೊಡುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಚಿಕಿತ್ಸೆಯನ್ನು ಉಚಿತವಾಗಿ ಕೊಡುವಂತಹದ್ದು ಇದ್ದರೆ ಕಾಂಟಾಕ್ಟ್ ಮಾಡುವಂತಹ ನಂಬರ್‌ಗಳು ಏನು? ಮಾನ್ಯ ಸಚಿವರು ಮನೆಗೆ ವೈದ್ಯರು ಬರುತ್ತಾರೆ ಎಂದು ಹೇಳಿದರು. ಇದರ ಬಗ್ಗೆ ಯಾರಿಗೆ ಫೋನ್ ಮಾಡುವುದು? ಎಷ್ಟು ಕಾಂಟಾಕ್ಟ್ ನಂಬರ್‌ಗಳನ್ನು ಇಟ್ಟಿದ್ದೀರಿ? ಆಸ್ಪತ್ರೆಗಳಿಗಿಂತ ಕ್ಲಿನಿಕ್‌ಗಳಿಗೆ ಹೋದರೆ ಸಾಕು ಎಂದು ಮಾನ್ಯ ಸಚಿವರು ಹೇಳಿದರು. ಆ ಕ್ಲಿನಿಕ್ ನಂಬರ್‌ಗಳು ಯಾವುವು? ಬೆಂಗಳೂರಿನಲ್ಲಿರುವ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ಕೊಡುತ್ತೇವೆ ಎನ್ನುವಂತಹದ್ದು ಇದ್ದರೆ, ಅದರ ಬಗ್ಗೆ ಸ್ಪಷ್ಟವಾಗಿ ಸಾರ್ವಜನಿಕರಿಗೆ ಹೇಳಬೇಕು. ಎರಡನೆಯದು, testing ಗೆ ಮೊದಲು ಹೋದ ತಕ್ಷಣ ಯಾವ ಟೆಸ್ಟ್ ಮಾಡುತ್ತಾರೆ, ಕೇವಲ ಮೈಗೆ ಇಟ್ಟು ಜ್ವರ ಇದೆಯೋ, ಇಲ್ಲವೋ ಎಂಬುದು ನೋಡಿದರೆ ಅದು ಗೊತ್ತಾಗುವುದಿಲ್ಲ. ಈ ವೈರಸ್ ಒಳಗೆ ಹೋದ ಮೇಲೆ 14 ದಿವಸಗಳ ನಂತರ ಗೊತ್ತಾಗುತ್ತದೆ. ಮೊದಲು ಅದಕ್ಕೆ ಏನಾದರೂ ಟೆಸ್ಟ್ ಮಾಡುವಂತಹದ್ದು, ಆ ಟೆಸ್ಟ್‌ನ್ನು ಖಾಸಗಿ ಆಸ್ಪತ್ರೆಯಲ್ಲಿ ಉಚಿತವಾಗಿ ಮಾಡುತ್ತಾರೋ, ದುಡ್ಡನ್ನು ತೆಗೆದುಕೊಳ್ಳುತ್ತಾರೋ ಇದರ ಬಗ್ಗೆ ಮಾನ್ಯ ಸಚಿವರು ಮೊದಲು clarify ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಎಂ.ಇಬ್ರಾಹಿಂರವರು . . . .

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವೈದ್ಯರನ್ನು ಭೇಟಿ ಮಾಡುವ ಬದಲು ಎಲ್ಲಾ ಮೆಡಿಕಲ್ ಶಾಪ್ ಏನಿದೆ, ಅಲ್ಲಿಯೇ ನೀವು temporary ಆಗಿ ಈ fever check ಅನ್ನು ಮಾಡಿಸಿದರೆ ಒಳ್ಳೆಯದು. ಏಕೆಂದರೆ, rush ಆಗುವುದಿಲ್ಲ. ಯಾರು ಕೂಡ ದೂರ ಹೋಗುವುದಕ್ಕೂ ಸಹ ಆಗುವುದಿಲ್ಲ. ಮೆಡಿಕಲ್ ಶಾಪ್ ಹತ್ತಿರವೇ ಮಾಡುವ ರೀತಿಯಲ್ಲಿಯೇ ಮಾಡಿದರೆ ಒಳ್ಳೆಯದು, ತಮಗೆ ಗೊತ್ತಿರುವ ಹಾಗೆ ಬೇರೆ ಸಂಘ ಸಂಸ್ಥೆಗಳು ಮಾಡುವುದಕ್ಕೆ ತಯಾರು ಇದ್ದೇವೆ. ತಾವು ಇದನ್ನು provide ಮಾಡಿದರೆ ಸಾಕು ಎನ್ನುವುದು ನನ್ನ ಭಾವನೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈಗ ಮುಖ್ಯವಾಗಿ ಜನರು ಈ ವೈರಸ್‌ಗೆ ಸೋಂಕಿತರಾಗಿರುವವರು ಮತ್ತು ಸೋಂಕಿತರಾಗಿಲ್ಲದೇ ಇರುವವರು, ಅವರಿಗೆ ಏನೇ ಜ್ವರ ಬಂದಿದ್ದರೂ ಕೂಡ ನಾನು ಇದಕ್ಕೆ ಸೋಂಕಿತನಾಗಿದ್ದೇನೋ, ಇಲ್ಲವೋ ಎನ್ನುವಂತಹ ಪ್ರಶ್ನೆ ಬಹಳ ಮುಖ್ಯವಾಗಿ ಉದ್ಭವವಾಗುತ್ತದೆ. ಹಾಗಾಗಿ ಇಂತಹ ವ್ಯಕ್ತಿಗಳು ನಮ್ಮ ಸಹಾಯವಾಣಿ '104' ಕ್ಕೆ ಸಂಪರ್ಕ ಮಾಡುವುದಕ್ಕೆ ಅವಕಾಶ ಇದೆ ಮತ್ತು ಈಗ ಹೊಸದಾಗಿ ಇನ್ನಷ್ಟು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಸಾಕಷ್ಟು ಪರಿಣಾಮಕಾರಿಯಾಗಿ, ವ್ಯಾಪಕವಾಗಿ ಎಲ್ಲಾ ಜನರಿಗೂ ಯಾವುದೇ ರೀತಿಯಲ್ಲಿ ಅನಾನುಕೂಲತೆಯಾಗದೇ ಇರುವ ರೀತಿಯಲ್ಲಿ ಎಲ್ಲವನ್ನೂ ಸರಳವಾಗಿ ಮತ್ತು ಸುಲಭವಾಗಿ ಎಲ್ಲಾ ರೀತಿಯಾದಂತಹ ಮಾಹಿತಿಯನ್ನು ಒದಗಿಸುವುದಕ್ಕೆ ಬಹಳಷ್ಟು ಸಿಬ್ಬಂದಿಗಳನ್ನು ಪ್ರತ್ಯೇಕವಾಗಿ ಅಪರ ಮುಖ್ಯ ಕಾರ್ಯದರ್ಶಿಯವರ ಮಟ್ಟದ ಅಧಿಕಾರಿಗಳಿಗೆ ಇದನ್ನು ನಿರ್ವಹಿಸುವುದಕ್ಕೆ ಜವಾಬ್ದಾರಿಯನ್ನು ಕೊಡಲಾಗಿದೆ ಮತ್ತು ಇನ್ನು ಸಾಕಷ್ಟು ವ್ಯವಸ್ಥೆಗಳನ್ನು ಮಾಡಲಾಗಿದೆ.

ಎರಡನೆಯದಾಗಿ, ಜ್ವರ ಬಂದಂತಹ ವ್ಯಕ್ತಿಗಳು ಎಲ್ಲಿ ಬೇಕಾದರೂ ಅಲ್ಲಿಗೆ ಹೋಗಿ screening ಮಾಡಿಸಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಏಕೆಂದರೆ, ಇದು ತುಂಬಾ ಸೋಂಕಿತವಾದ ಕಾಯಿಲೆಯಾಗಿರುವುದರಿಂದ ಮತ್ತು ಬಹಳ ವೇಗವಾಗಿ infect ಆಗುವುದರಿಂದ, ಇದಕ್ಕೆ ಪ್ರತ್ಯೇಕವಾಗಿ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಒಂದು ನಿಗದಿತವಾದ ಸ್ಥಳದಲ್ಲಿಯೇ makeshift arrangement ಮೇಲೆ Fever Clinic establish ಮಾಡಿ, ಇಲ್ಲಿ ಪರೀಕ್ಷೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಇಲ್ಲಿ ಏನಾಗುತ್ತದೆ ಎಂದರೆ, ಈ ರೀತಿ ನೇರವಾಗಿ ಆಸ್ಪತ್ರೆಗಳಿಗೆ ಹೋದರೆ ಆಸ್ಪತ್ರೆಗಳ ಮೇಲೆ ಹೊರೆ ಜಾಸ್ತಿಯಾಗುತ್ತದೆ. ಈ ಆಸ್ಪತ್ರೆಗಳು ಸೋಂಕಿತರು ಇರುವಂತಹ ಜಾಗವಾಗಿರುತ್ತದೆ. ಆದ್ದರಿಂದ ಅಲ್ಲಿಗೆ ಹೋಗುವಂತಹದ್ದು ಬೇಡ. ಒಂದು ನಿಗದಿತವಾದಂತಹ ಆಯಾಯ ಸ್ಥಳದಲ್ಲಿಯೇ screening ಆಗಬೇಕೆಂಬ ದೃಷ್ಟಿಯಿಂದ ಅಲ್ಲಿಯೇ ವ್ಯವಸ್ಥೆಯನ್ನು ಮಾಡಿಕೊಡುತ್ತಿದ್ದೇವೆ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಚಿವರೇ ಒಂದು ನಿಮಿಷ. ಈ ಸೋಂಕು ಯಾವ ರೀತಿಯಲ್ಲಿ ಬರುತ್ತದೆ? ಈ ಜ್ವರ ಸ್ಪರ್ಶ ಮತ್ತು ಉಸಿರಾಟದಿಂದ ಬರುತ್ತದೆಯೇ, ಈ ಸೋಂಕಿನ ಸ್ವರೂಪ ಯಾವ ರೀತಿಯಲ್ಲಿ ಇರುತ್ತದೆ ಎಂಬುದು ನಮಗೆ ಗೊತ್ತಿರುವುದಿಲ್ಲ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈ ಸೋಂಕು ಮುಖ್ಯವಾಗಿ ಸ್ಪರ್ಶ ಮತ್ತು ಕಾಂಟಾಕ್ಟ್‌ನಿಂದ ಬರುವಂತಹದ್ದು. ಹಾಗೆಯೇ ಈ ಸೋಂಕು ಉಸಿರಾಟದಿಂದ ಬರುತ್ತದೆ ಎಂದು ಸಹ ಹೇಳಲಾಗುತ್ತಿತ್ತು. ಇದು ಉಸಿರಾಟದಿಂದ ಬರುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಮಗೂ ಕೂಡ ಪ್ರಶ್ನೆ ಇದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದನ್ನು airborne disease ಎಂದು ಹೇಳುತ್ತಾರೆ. ಇದರಲ್ಲಿ ಪರಿಣತಿ ಹೊಂದಿರುವಂತಹ World Health Organisation (WHO)ನವರು ಘೋಷಣೆ ಮಾಡಿದ್ದಾರೆ. ನಾವು ನೀವು ಮಾಡಿರುವುದಲ್ಲ. ಹಾಗಾದರೆ ಈ ಸೋಂಕು ಉಸಿರಾಟದಿಂದ ಬಂದ ಹಾಗೆ ಆಯಿತು.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, airborne droplets ಏನಿದೆ, ಆ droplets ಅನ್ನು ಬಿಟ್ಟಾಗ ಅಂದರೆ ಕೆಮ್ಮಿದಾಗ . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಸೋಂಕು ಸಂಪರ್ಕದಿಂದ ಮತ್ತು ಹಸ್ತಲಾಘವದಿಂದ ಬರುತ್ತದೆ ಎಂದು ಹೇಳುತ್ತಾರೆ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈಗ ಕಾಂಟಾಕ್ಟ್ ಎಂದರೆ, ನಾನು ಕೆಮ್ಮಿದಾಗ ಬರುವಂತಹ droplets ಎಲ್ಲಾದರೂ ಬಿದ್ದು, ಅದು ಸ್ಪರ್ಶವಾದಾಗ ಅದನ್ನು ನಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾದರೂ ಮುಟ್ಟಿಕೊಂಡಾಗ, ಆ ರೀತಿಯ ಕಾಂಟಾಕ್ಟ್‌ನಿಂದ ಬರುವಂತಹದ್ದನ್ನು ಕಾಂಟಾಕ್ಟ್ ಎಂದು ಹೇಳುತ್ತೇವೆ.

**Sri S.R.PATIL:- Mr.Chairman Sir, the** World Health Organisation has gone one step ahead. It is an airborne disease ಎಂದು ಹೇಳಿದ್ದಾರೆ. ಈ ಕಾಂಟಾಕ್ಟ್ ಎನ್ನುವುದು ಮೊದಲ primitive stage ನಲ್ಲಿ ಇದೆ ಎನ್ನುವ ರೀತಿಯಲ್ಲಿ ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಡಾ|| ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, airborne ನಲ್ಲಿ ಕಾಂಟಾಕ್ಟ್‌ನಿಂದ ಬರುತ್ತಿರುವ droplets ಬಂದು drop ಆಗುತ್ತಿದೆಯಲ್ಲವೇ, ಇದು ಕಾಂಟಾಕ್ಟ್‌ನಿಂದ ಬಂದು ಆಗುತ್ತಿರುವುದು. ಮೊದಲು ಸ್ಪರ್ಶದಿಂದ ಬಂದು ಮತ್ತೆ ಸ್ಪರ್ಶದಿಂದ ಬಾಯಿ, ಮೂಗು ಮತ್ತು ಕಣ್ಣು ಎಲ್ಲಾದರೂ mucus ಇರುವಂತಹ ಭಾಗದಿಂದ ಸ್ಪರ್ಶವಾಗಿ ಈ ಸೋಂಕು ಹರಡುವಂತಹದ್ದು ಆಗುತ್ತಿದೆ. ಆದ್ದರಿಂದ ಇದನ್ನು ಕಾಂಟಾಕ್ಟ್ ಎಂದು ಹೇಳುತ್ತಿದ್ದೇವೆ. ಕಾಂಟಾಕ್ಟ್ ಎಂದರೆ ಮನುಷ್ಯ ಮುಟ್ಟಿದ ತಕ್ಷಣ ಈ ಸೋಂಕು ಹರಡುವಂತಹದಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ ಒಂದು ಮೀಟರ್ ಅಂತರವನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತಾರೆ. ಇದರ ಅರ್ಥ ನನ್ನ ದೃಷ್ಟಿಯಲ್ಲಿ ನನ್ನ ಉಸಿರಾಟದಲ್ಲಿ ಇರುವಂತಹ ಕೋವಿಡ್-19 ವೈರಾಣುಗಳು ಹೊರಗಡೆ ಹೋಗುವಂತಹ ಸಾಧ್ಯತೆ ಇರುತ್ತದೆ ಮತ್ತು ನನ್ನ ಎದುರುಗಡೆ ಇರುವವನು ಅದನ್ನು inhale ಮಾಡಿದಾಗ ಆತನಿಗೂ ಸಹ ಈ ಸೋಂಕು ಬರುವಂತಹ ಸಾಧ್ಯತೆ ಇರುತ್ತದೆ ಎಂದು ಅನಿಸುತ್ತಿದೆ. ನನ್ನ ದೃಷ್ಟಿಯಲ್ಲಿ ಇದೇ airborne disease .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, . . .

**ಡಾ|| ಅಶ್ವತ್ಥನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ನಮ್ಮ isolation facilityಗೆ ಹೇಗೆ detect ಮಾಡಲಾಗುತ್ತಿದೆ ಮತ್ತು ಇದಕ್ಕೆ ಏನೇನು ಮಾಡಲಾಗುತ್ತಿದೆ ಎಂದು ಮಾನ್ಯ ಸದಸ್ಯರುಗಳು ಕೇಳುತ್ತಿದ್ದರು. ಮುಖ್ಯವಾಗಿ ಯಾರ್ಯಾರನ್ನೂ quarantine ಮಾಡಬೇಕು. ಈಗಾಗಲೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

quarantine ಮಾಡಿದ್ದೇವೆ. ಅವರನ್ನು 14 ದಿನದವರೆಗೂ ಮನೆಯಲ್ಲಿಯೇ ಇರಬೇಕೆಂದು ನಿಗದಿ ಮಾಡಿದ್ದು, ಅವರನ್ನು ಅವರವರ ಮನೆಯಲ್ಲಿಯೇ quarantine ಮಾಡಿದವರನ್ನು ಮಾನಿಟರ್ ಮಾಡುವುದಕ್ಕೆ ಯಾರ್ಯಾರನ್ನೂ ನೇಮಿಸಿದ್ದೇವೆ ಎಂಬುದು ನಮಗೆ ಗೊತ್ತಿರುತ್ತದೆ. ಹಾಗಾಗಿ ಆ ರೀತಿಯಲ್ಲಿ quarantine ಮಾಡಿದ ಮನೆಗಳ ಮೇಲೆ ನೋಟಿಫೈ ಮಾಡುವಂತಹದ್ದು ಆಗುತ್ತದೆ. ಇನ್ನು ಯಾರು ಸೋಂಕಿತರಾಗಿದ್ದಾರೆ, infect ಆಗಿದ್ದಾರೆ, ಅಂತಹ ಮನೆಗಳು ಮತ್ತು ವ್ಯಕ್ತಿಗಳು ನೋಟಿಫೈ ಆಗಿ ಲ್ಯಾಬ್ ಟೆಸ್ಟ್ ಮತ್ತು ಲ್ಯಾಬ್ ರಿಪೋರ್ಟ್ ಬಂದ ನಂತರ ಯಾರು ನೋಟಿಫೈಯಾಗಿದ್ದಾರೆ, ಅಂತಹ ಮನೆಗಳನ್ನು ಕೂಡ quarantine ಮಾಡುವಂತಹದ್ದು ಮತ್ತು ಈ ಲ್ಯಾಬ್ ಟೆಸ್ಟ್‌ಗಳನ್ನು ಸರ್ಕಾರದ ಮಟ್ಟದಲ್ಲಿ ಉಚಿತವಾಗಿ ಮಾಡುವಂತಹದ್ದು, ಇದಕ್ಕೆ ಖಾಸಗಿ ಆಸ್ಪತ್ರೆಗಳಲ್ಲಿ ಟ್ರೀಟ್‌ಮೆಂಟ್ ಮಾಡುವುದಕ್ಕೆ ನಾವು adviseಮಾಡುತ್ತಿಲ್ಲ. ಇಷ್ಟನ್ನೂ ನಾವೇನು Isolation Hospitals ಎಂದು ಮಾಡುತ್ತಿದ್ದೇವೆ, ಈ Isolation Hospitals ಗಳಲ್ಲಿ ಚಿಕಿತ್ಸೆಯನ್ನು ಕೊಡುವುದಕ್ಕೆ ನಾವು ನಿಗದಿ ಮಾಡುತ್ತಿದ್ದೇವೆ. ಏಕೆಂದರೆ, ಈ ರೋಗಿಗಳು ರೆಗ್ಯುಲರ್ ಆಸ್ಪತ್ರೆಗಳಿಗೆ ಹೋದರೆ ಈ ಸೋಂಕು ಇನ್ನೂ ಹರಡುವಂತಹದ್ದು ಆಗುತ್ತದೆ. ಹಾಗಾಗಿ, exclusively, Isolation Hospitals ಗಳಲ್ಲಿಯೇ ಟ್ರೀಟ್‌ಮೆಂಟ್ ಅನ್ನು ಕೊಡಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಶೇಕಡಾ 30 ರಷ್ಟು ಖಾಸಗಿ ಆಸ್ಪತ್ರೆಗಳಲ್ಲಿ isolation ಗೆ ಎಷ್ಟು ದುಡ್ಡು ಆಗುತ್ತದೆ, ಆ ದುಡ್ಡನ್ನು ಕೊಡುವವರು ಯಾರು? Isolation ಬಗ್ಗೆ ಮಾನ್ಯ ಸಚಿವರು ಹೇಳುತ್ತಿಲ್ಲ. ಅದರ ಬಗ್ಗೆ ಮೊದಲು ಹೇಳಿ.

**ಡಾ॥ ಅಶ್ವತ್ಥನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, isolation ಅನ್ನು ನಾವೇ ಮಾಡುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳು ಇದರಲ್ಲಿ ಉದ್ಭವವಾಗುವುದಿಲ್ಲ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಚಿವರಾದ ಸಿ.ಎನ್.ಅಶ್ವತ್ಥನಾರಾಯಣರವರೇ, ಒಂದು ನಿಮಿಷ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಟ್ರೀಟ್‌ಮೆಂಟ್ ಅನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂರವರೇ, ಒಂದು ನಿಮಿಷ. ಒಟ್ಟಾರೆಯಾಗಿ ಇಡೀ ರಾಜ್ಯದಲ್ಲಿ ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲ್ಲೂಕು ಆಸ್ಪತ್ರೆಗಳು ಆಗಿರಬಹುದು. ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡೆಗಳಲ್ಲಿಯೂ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳನ್ನೂ ಸೇರಿಸಿ ಸುಮಾರು ಎರಡು ಸಾವಿರ ಬೆಡ್‌ಗಳನ್ನು ಕಾಯ್ದಿರಿಸಿದ್ದೇವೆ. ಇದರ ಜೊತೆಗೆ ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಸುಮಾರು ಎರಡು ಸಾವಿರ ಬೆಡ್‌ಗಳ ಸಾಮರ್ಥ್ಯವನ್ನು ಹೊಂದಿರುವಂತಹ ಆಸ್ಪತ್ರೆಯಾಗಿದೆ. ಇಡೀ ರಾಜ್ಯದಲ್ಲಿ ಯಾವ ರೀತಿಯಲ್ಲಿಯೂ ಕೂಡ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಹತ್ತು ಸಾವಿರ ಮಂದಿ ಬಂದರೂ ಕೂಡ ಇದನ್ನು ಹತೋಟಿಯಲ್ಲಿ ಇಟ್ಟಕೊಳ್ಳಬೇಕೆಂಬ ಕಾರಣದಿಂದ ವಿಕ್ಟೋರಿಯಾ ಆಸ್ಪತ್ರೆಯನ್ನು 'ಕೋವಿಡ್ ಆಸ್ಪತ್ರೆ' ಎಂದು ಘೋಷಣೆ ಕೂಡ ಮಾಡಲಾಗಿದೆ. ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಇದಕ್ಕೋಸ್ಕರ ಎರಡು ಸಾವಿರ ಬೆಡ್‌ಗಳನ್ನು ಸಹ ಮೀಸಲಿರಿಸಿದ್ದೇವೆ. ಹಾಗೆಯೇ Isolation Wards ಗಳನ್ನು ಮಾಡಿದ್ದೇವೆ. ಕೆಲವು ಕಡೆ ಸೋಂಕು ಕಾಣಿಸಿಕೊಂಡರೆ ಅಲ್ಲಿ home quarantine ಕೂಡ ಮಾಡುತ್ತಿದ್ದೇವೆ. ಹೋಂ ಕ್ವಾರಂಟೈನ್ ಇರುವಂತಹ ಜನರು ಹೊರಗಡೆ ಹೋದಂತಹ ಸಂದರ್ಭದಲ್ಲಿಯೂ ಕೂಡ ಅವರನ್ನು ಮಾನಿಟರ್ ಮಾಡಲು ಪೊಲೀಸ್ ಸಿಬ್ಬಂದಿಗಳನ್ನು ಮತ್ತು Home Guards ಗಳನ್ನು ಸಹ ಇಟ್ಟಿದ್ದೇವೆ. ಕೆಲವು ಕಡೆಗಳಲ್ಲಿ ಎಂದರೆ, ಉದಾಹರಣೆಗೆ ನೆನ್ನೆಯ ದಿವಸ ಚಿಕ್ಕಬಳ್ಳಾಪುರದ ಏರ್‌ಪೋರ್ಟ್‌ನಲ್ಲಿ ಆಸ್ಟ್ರೇಲಿಯಾದ ವ್ಯಕ್ತಿ ಇಳಿದಂತಹ ಸಂದರ್ಭದಲ್ಲಿ ಆ ವ್ಯಕ್ತಿ stamp ಹಾಕಿಸಿಕೊಂಡು ಹೊರಗಡೆ ಅಡ್ಡಾಡುತ್ತಿದ್ದಾಗ ಅಲ್ಲಿನ ಜನರು ದೂರನ್ನು ಹೇಳಿದರು.

(ಮುಂದು)

**(701) 24/03/2020/1:50/ಎಸ್‌ಪಿಆರ್/ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಶ್ರೀರಾಮುಲು(ಮುಂದು):-**

ಅಲ್ಲಿನ ಸ್ಥಳೀಯ ಜನರು stamp ಹಾಕಿಸಿಕೊಂಡ ವ್ಯಕ್ತಿಯು ಅಡ್ಡಾಡುತ್ತಿರುವ ಬಗ್ಗೆ ದೂರವಾಣಿ ಮಾಡಿ ಮಾಹಿತಿ ನೀಡಿದ ತಕ್ಷಣವೇ ಸಿಬ್ಬಂದಿಗಳನ್ನು ಕಳುಹಿಸಿ, ಆ ವ್ಯಕ್ತಿಯನ್ನು ಕರೆದುಕೊಂಡು home quarantine ಮಾಡುವ ಕೆಲಸಗಳನ್ನು ಮಾಡುತ್ತಿದ್ದೇವೆ. ಇಂತಹ ಎಲ್ಲಾ ರೀತಿಯ ಕೆಲಸಗಳನ್ನು ಮಾಡಲಾಗುತ್ತಿದೆ.ಮುಂದಿನ ದಿನಗಳಲ್ಲಿ ಸುಮಾರು ಒಂದು ಲಕ್ಷ ಜನರಿಗೆ ಸೋಂಕು ತಗುಲಿದರೆ, ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದೇವೆ.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಶೇಕಡಾ 30 ರಷ್ಟು ಖಾಸಗಿ ಆಸ್ಪತ್ರೆಗಳನ್ನು ಮೀಸಲಿಟ್ಟಿರುವುದಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಶ್ರೀರಾಮುಲು(ಆರೋಗ್ಯ ಸಚಿವರು):-** ಮಾನ್ಯ ಸಭಾಪತಿಯವರೇ, ಖಾಸಗಿ ಆಸ್ಪತ್ರೆಗಳಲ್ಲಿನ ಶೇಕಡಾ 30 ರಷ್ಟು ವೆಂಟಿಲೇಟರ್‌ಗಳನ್ನು ಮೀಸಲಿಟ್ಟಿದ್ದೇವೆ ಹಾಗೂ ಮನವಿಯನ್ನೂ ಸಹ ಮಾಡಿದ್ದೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಅವುಗಳನ್ನು ಬಳಸುವ ಸನ್ನಿವೇಶವೆಂದರೆ ಏನು ಮಾಡುತ್ತೀರಿ? ಇದಕ್ಕೆ ಹಣವನ್ನು ನೀಡುವವರು ಯಾರು?

**ಶ್ರೀ ಬಿ.ಶ್ರೀರಾಮುಲು:-**ಮಾನ್ಯ ಸಭಾಪತಿಯವರೇ, ಖಾಸಗಿ ಆಸ್ಪತ್ರೆಯವರು ಶೇಕಡಾ 30 ರಷ್ಟು ವೆಂಟಿಲೇಟರ್‌ಗಳನ್ನು ಉಚಿತವಾಗಿ ನೀಡುವುದಾಗಿ ತಿಳಿಸಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:-**ಮಾನ್ಯ ಸಭಾಪತಿಯವರೇ, ಆ ರೀತಿಯಾಗಿ ಸರ್ಕಾರವು ಡಿಕ್ಲೇರ್ ಮಾಡಲಿ. ಅದೇ ರೀತಿಯಾಗಿ ಸರ್ಕಾರವು ಅಂತಹ ಆಸ್ಪತ್ರೆಗಳ ಹೆಸರುಗಳನ್ನು ಘೋಷಿಸಲಿ.ಅವುಗಳು ಯಾವ್ಯಾವ ಜಿಲ್ಲಾ ಕೇಂದ್ರಗಳಲ್ಲಿವೆ ಎನ್ನುವುದನ್ನೂ ಸಹ ಸರ್ಕಾರವು ತಿಳಿಸಲಿ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಒಂದು ಸಾವಿರ ವೆಂಟಿಲೇಟರ್‌ಗಳನ್ನು ಸರ್ಕಾರ ಖರೀದಿಸಬೇಕು. ಏಕೆಂದರೆ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿನ ವೆಂಟಿಲೇಟರ್‌ಗಳನ್ನು ಲೆಕ್ಕ ಹಾಕಿದಾಗ ಕೇವಲ 700 ವೆಂಟಿಲೇಟರ್‌ಗಳು ಮಾತ್ರವೇ ದೊರೆಯುತ್ತವೆ. ನಿನ್ನೆಯ ದಿವಸ ಒಂದು ಸಾವಿರ ವೆಂಟಿಲೇಟರ್‌ಗಳನ್ನು ಖರೀದಿಸಬೇಕೆಂಬ ಆದೇಶವನ್ನು ಮಾಡಲಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ತಪಾಸಣೆಗೆ ಹಾಗೂ ಚಿಕಿತ್ಸೆಗೆ ವಿಳಂಬ ಮಾಡಿದರೆ ಈ ಬಗ್ಗೆ ಸರ್ಕಾರವು ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಹತ್ವದ ವಿಚಾರವನ್ನೊಂದನ್ನು ನಾನು ಹೇಳುತ್ತೇನೆ. ನಿನ್ನೆಯ ದಿವಸ ಖ್ಯಾತ ವೈದ್ಯರಾದ ಡಾ||ದೇವಿ ಶೆಟ್ಟಿಯವರು ಹೇಳಿಕೆಯೊಂದನ್ನು ನೀಡಿದ್ದಾರೆ. ಮಾನ್ಯ ಆರೋಗ್ಯ ಸಚಿವರೇ, ನಾನು ಈ ವಿಚಾರದಲ್ಲಿ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಖ್ಯಾತ ವೈದ್ಯರಾದ ಡಾ|| ದೇವಿ ಶೆಟ್ಟಿಯವರು ನಿನ್ನೆಯ ದಿವಸ ನೀಡಿರುವ ಹೇಳಿಕೆಯನ್ನು ನಾನು ನೋಡಿದ್ದೇನೆ. ಅದರಲ್ಲಿ ಅಂದಾಜು 80,000 ದಷ್ಟು ಜನರಿಗೆ ಸೋಂಕು ತಗಲುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಆದರೆ ಈಗಾಗಲೇ ನಮ್ಮ ಉಪ ಮುಖ್ಯಮಂತ್ರಿಗಳು ಒಂದು ಲಕ್ಷ ಎಂಬುದಾಗಿ ಹೇಳಿದ್ದಾರೆ. 80,000 ಜನರಿಗೆ ಸೋಂಕು ತಗಲುವ ಸಾಧ್ಯತೆ ಅತೀ ಹೆಚ್ಚು ಇದೆ ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ 17,000 ದಷ್ಟು ನಿಗಾ ಘಟಕಗಳು ಬೇಕಾಗುತ್ತವೆ ಎಂದು ವೈದ್ಯರು ಹೇಳಿದ್ದಾರೆ. ಆದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ, ಒಂದು ವೇಳೆ ಒಂದು ಲಕ್ಷ ಜನರಿಗೆ ಸೋಂಕು ತಗುಲಿದರೆ, ಅಂದಾಜು ಇಪ್ಪತ್ತು ಸಾವಿರದಷ್ಟು ನಿಗಾ ಘಟಕಗಳು ಅಂದರೆ I.C.U. (Intensive Care Unit) ಗಳ ವ್ಯವಸ್ಥೆ ಮಾಡಬೇಕಾಗುತ್ತವೆ. ಅಂದರೆ ಸೋಂಕಿತ ರೋಗಿಗಳಿಗೆ ಇಪ್ಪತ್ತು ಸಾವಿರದಷ್ಟು ನಿಗಾ ಘಟಕಗಳ ವ್ಯವಸ್ಥೆ ಮಾಡಬೇಕಾಗುತ್ತವೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈಗಾಗಲೇ 300 ವೆಂಟಿಲೇಟರ್‌ಗಳು ಸರ್ಕಾರದಲ್ಲಿವೆ ಹಾಗೂ ಒಂದು ನೂರು ವೆಂಟಿಲೇಟರ್‌ಗಳನ್ನು ಖಾಸಗಿಯಾಗಿ ಪಡೆದುಕೊಳ್ಳುತ್ತೇವೆ ಎಂಬುದಾಗಿ ಹೇಳಿದ್ದಾರೆ. ಅಂದರೆ ಒಟ್ಟಾರೆಯಾಗಿ ನಾಲ್ಕು ನೂರು ವೆಂಟಿಲೇಟರ್‌ಗಳ ವ್ಯವಸ್ಥೆ ಮಾಡಲಾಗಿದೆ. ಆದರೆ ಇಲ್ಲಿ ಅಂದಾಜು ಇಪ್ಪತ್ತು ಸಾವಿರ ನಿಗಾ ಘಟಕಗಳಲ್ಲಿ ಇರುವ ರೋಗಿಗಳಿಗೆ ಇಪ್ಪತ್ತು ಸಾವಿರ ವೆಂಟಿಲೇಟರ್‌ಗಳ ಅವಶ್ಯಕತೆ ಇದೆ. ಆದರೆ ನಮ್ಮ ರಾಜ್ಯದಲ್ಲಿ ಕೇವಲ ನಾಲ್ಕು ನೂರು ವೆಂಟಲೇರ್‌ಗಳು ಮಾತ್ರವೇ ಲಭ್ಯ ಇವೆ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಸರ್ಕಾರವು ಈ ಬಗ್ಗೆ ಮಾಡಲಾಗುವುದು, ಹೇಳಲಾಗುವುದು, ವಿಚಾರಿಸಲಾಗುವುದು ಎಂಬುದಾಗಿ ಹೇಳುತ್ತಿದೆ. This is a very very serious matter.

**ಡಾ॥ಸಿ.ಎನ್.ಅಶ್ವತ್ಥ ನಾರಾಯಣ(ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಪ್ರತಿಪಕ್ಷಗಳ ಗಮನವನ್ನು ಸೆಳೆಯಲು ಬಯಸುತ್ತೇನೆ. ಇಷ್ಟು ಜನ ಸೋಂಕಿತರಿದ್ದರೋ ಅವರಿಗೆ ಯಾರಿಗೂ ಸಹ ವೆಂಟಿಲೇಟರ್‌ನ ಅವಶ್ಯಕತೆ ಇರಲಿಲ್ಲ. 20,000 ಪ್ರಕರಣಗಳಲ್ಲಿ ಕೇವಲ 2,000 ಗಳಿಗಿಂತ ಹೆಚ್ಚು ಪ್ರಕರಣಗಳು ಕಾಂಪ್ಲಿಕೇಷನ್ ಆಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದನ್ನು ಮಂತ್ರಿಗಳು ಹೇಗೆ ಹೇಳುತ್ತಾರೆ?

**ಡಾ॥ ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಡಾ॥ ದೇವಿ ಶೆಟ್ಟಿಯವರ ಹೇಳಿಕೆಯನ್ನು ವಿರೋಧ ಪಕ್ಷದ ನಾಯಕರು ನೋಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಬಳಿ ಡಾ॥ದೇವಿ ಶೆಟ್ಟಿಯವರ ಹೇಳಿಕೆಯಿದೆ. ಅದನ್ನು ಮಾನ್ಯ ಮಂತ್ರಿಗಳು ನೋಡಲಿ. I will send this statement. ಅಂದಾಜು 80,000 ಸಾವಿರ ಜನರಿಗೆ ಸೋಂಕು ತಗಲುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. 80,000 ಜನರಿಗೆ ನಿಗಾ ಘಟಕ ವೆಂಟಿಲೇಟರ್‌ಗಳನ್ನು ಕೇಳಿಲ್ಲ. ಆ ಪೈಕಿ 17,000 ರೋಗಿಗಳಿಗೆ ಹಾಗೂ ರೋಗದ ಪಾಸಿಟಿವ್ ಲಕ್ಷಣದವರಿಗೆ ಹಾಗೂ ಗಂಭೀರವಾಗಿರುವವರಿಗೆ . . . .

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರವು ಈ ವಿಚಾರದಲ್ಲಿ press conference ನ್ನು ಮಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 80,000 ಜನರಿಗೆ ಸೋಂಕು ತಗುಲಿದರೆ ಆ ಪೈಕಿ 17,000 ರೋಗಿಗಳನ್ನು ನಿಗಾ ಘಟಕದಲ್ಲಿಡುವ ಪರಿಸ್ಥಿತಿ ಉದ್ಭವಿಸುತ್ತದೆ. 17,000 ರೋಗಿಗಳು ನಿಗಾ ಘಟಕದಲ್ಲಿದ್ದಾಗ 17,000 ವೆಂಟಿಲೇಟರ್‌ಗಳ ಅವಶ್ಯಕತೆ ಇರುತ್ತದೆ. ಭವಿಷ್ಯತ್ತಿನಲ್ಲುಂಟಾಗುವ ತೊಂದರೆಯನ್ನು ಗಮನಿಸಿ, ವಿಶ್ವ ಆರೋಗ್ಯ ಸಂಸ್ಥೆಯವರು ಎಲ್ಲಾ ದೇಶಗಳಿಗೆ ಅವರ ಬಳಿಯಿರುವ ವೆಂಟಿಲೇಟರ್‌ಗಳನ್ನು ನಿರ್ವಹಣೆ ಮಾಡಬೇಕೆಂಬ ಸಂದೇಶವನ್ನು ನೀಡಿದ್ದರು. ಇವತ್ತಿನ ದಿವಸ ನಮ್ಮ ದೇಶದಲ್ಲಿ ಅಂದರೆ ದಿನಾಂಕ 19/03/2020 ರ ವರೆಗೆ ಎಲ್ಲಾ ವೆಂಟಿಲೇಟರ್‌ಗಳು ರಫ್ತು ಆಗಿವೆ. ಅಷ್ಟೇ ಅಲ್ಲದೇ ಎನ್95 ಮಾಸ್ಕ್‌ಗಳೂ ಸಹ ರಫ್ತು ಆಗಿವೆ. ಯಾವ ದಿನಾಂಕದಿಂದ ರಫ್ತನ್ನು ನಿಲ್ಲಿಸಿದ್ದಾರೆ ಎನ್ನುವುದರ ಬಗ್ಗೆ ನಾನು ಕೇಂದ್ರ ಸರ್ಕಾರದ ಆದೇಶವನ್ನು ಕಳುಹಿಸಿ ಕೊಡುತ್ತೇನೆ. ದಿನಾಂಕ 19/03/2020 ಕ್ಕೆ ರಫ್ತಿನ ನಿರ್ಬಂಧವನ್ನು ಮಾಡಿದ್ದಾರೆ. ದಿನಾಂಕ 19/03/2020 ರ ವರೆಗೆ ಎಲ್ಲಾ ರೀತಿಯ ಕಚ್ಚಾ ವಸ್ತುಗಳ ಜೊತೆಗೆ ಎಲ್ಲಾ ವೆಂಟಿಲೇಟರ್‌ಗಳನ್ನು ಬೇರೆ ಬೇರೆ ದೇಶಗಳಿಗೆ ರಫ್ತು ಮಾಡಿದ್ದಾರೆ. ಸಾಮಾನ್ಯಕ್ಕಿಂತ ಶೇಕಡಾ 10 ರಷ್ಟು ಹೆಚ್ಚಿನ ಮೊತ್ತಕ್ಕೆ ನೀಡಿ, ರಫ್ತು ಮಾಡಿದ್ದಾರೆ. ಇದನ್ನು ದಿನಾಂಕ 19/03/2020 ಕ್ಕೆ ನಿಲ್ಲಿಸಿದ್ದಾರೆ. ಇದರಿಂದ ಈ ದೇಶದ ಸ್ಥಿತಿ ಗತಿ ಏನಾಗುತ್ತದೆ? ಅದೇ ರೀತಿಯಾಗಿ ನಮ್ಮ ರಾಜ್ಯದಲ್ಲೂ ಸಹ ಆಗುತ್ತದೆ. ಈ ಕಾರಣಕ್ಕಾಗಿ ನಾನು ಹೇಳುವುದೇನೆಂದರೆ, ಕೇವಲ 300-400 ವೆಂಟಿಲೇಟರ್‌ಗಳು ಸಾಕಾಗುವುದಿಲ್ಲ. ಡಾ॥ ದೇವಿ ಶೆಟ್ಟಿಯವರು ಹೇಳಿದಂತೆ, ಕನಿಷ್ಠ 17,000 ನಿಗಾ ಘಟಕಗಳು ಮತ್ತು ಅಷ್ಟೇ ಪ್ರಮಾಣದ ವೆಂಟಿಲೇಟರ್‌ಗಳ ಅವಶ್ಯಕತೆ ಇದೆ. ಆದರೆ ರಾಜ್ಯ ಸರ್ಕಾರವು ಈ ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಕೇಳಿದ ಪ್ರಶ್ನೆಗೆ ಪ್ರತ್ಯುತ್ತರವಾಗಿ ಜಿಲ್ಲಾವಾರು, ತಾಲ್ಲೂಕುವಾರು ಯಾವ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ ಎನ್ನುವುದನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಸರ್ಕಾರವು ತಿಳಿಸಬೇಕು. **(ಗೊಂದಲ)** ನಾವು ಕೇಳಿರುವ ಪ್ರಶ್ನೆಗಳ ಪೈಕಿ ಸರ್ಕಾರವು ಯಾವುದಕ್ಕೂ ಸಹ ಸರಿಯಾದ ಉತ್ತರವನ್ನು ನೀಡಿರುವುದಿಲ್ಲ.

**ಡಾ॥ ಅಶ್ವತ್ಥ ನಾರಾಯಣ:–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಬಿಡದೆ ಇದ್ದರೆ, . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ರಾಜ್ಯದ ಜಿಲ್ಲಾ, ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಯಾವುದೇ ರೀತಿಯಾದ ವ್ಯವಸ್ಥೆಯನ್ನು ಸರ್ಕಾರವು ಮಾಡಿಲ್ಲ. ರಾಜ್ಯ ಮಟ್ಟದಲ್ಲಿ ನಿರೀಕ್ಷಿತವಾದ ವ್ಯವಸ್ಥೆ ಇಲ್ಲ. ಅಂದ ಮೇಲೆ... **(ಗೊಂದಲ)** ಈಗಾಗಲೇ ವಿಶ್ವ ಆರೋಗ್ಯ ಸಂಸ್ಥೆಯು **(ಗೊಂದಲ)** ಎಂಬುದಾಗಿ ಘೋಷಿಸಿದೆ. ಇಂತಹ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಈ ಸರ್ಕಾರವು ಯಾವುದೇ ರೀತಿಯಾಗಿ ಸನ್ನದ್ಧವಾಗಿಲ್ಲ. ಈ ಸರ್ಕಾರದ ಬಳಿ ಹೆಚ್ಚುವರಿಯಾದ ವೆಂಟಿಲೇಟರ್‌ಗಳಿಲ್ಲ, ನಿಗಾ ಘಟಕಗಳಿಲ್ಲ. ಅದೇ ರೀತಿಯಾಗಿ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿನ ಆಸ್ಪತ್ರೆಗಳಲ್ಲಿ ಸರಿಯಾದ ವ್ಯವಸ್ಥೆಗಳಿಲ್ಲ. ಇಲ್ಲಿ ಕೈ ಮೀರಿ ಹೋಗುವಂತಹ ಸಾಧ್ಯತೆಗಳು ಬಹಳ ಇವೆ. **(ಗೊಂದಲ)** ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಯಾವುದೇ ರೀತಿಯಾದ ಗಂಭೀರವಾದ ಕ್ರಮಗಳನ್ನು ತೆಗೆದುಕೊಂಡಿಲ್ಲ ಎನ್ನುವುದು ಜಗತ್ ಜಾಹೀರಾಗಿದೆ ಎನ್ನುವ ಮಾತನ್ನು ನಾನು ಹೇಳಲು ಬಯಸುತ್ತೇನೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರವನ್ನು ನೀಡಲಿ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ...

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಕೈಮೀರಿ ಹೋಗುತ್ತಿದೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ವೆಂಟಿಲೇಟರ್‌ಗಳನ್ನು ಇನ್ನೂ ಹೆಚ್ಚಾಗಿ ಖರೀದಿ ಮಾಡಬೇಕಾಗಿತ್ತು ಹಾಗೂ ಸೋಂಕು ಹೆಚ್ಚಾಗಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪಾಸಿಟಿವ್ ಆಗುವ ಸಂದರ್ಭದಲ್ಲಿ ಕಡಿಮೆ ವೆಂಟಿಲೇಟರ್‌ಗಳನ್ನು ಖರೀದಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಭಾರತ ಸರ್ಕಾರ . . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಪರಿಸ್ಥಿತಿಯನ್ನು ಎದುರಿಸುವ ವಿಚಾರದಲ್ಲಿ ಕೇರಳ ರಾಜ್ಯದ ಮುಖ್ಯಮಂತ್ರಿಗಳು ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದಾರೆ. ಆ ಪೈಕಿ ಮಕ್ಕಳಿಗೆ ಬಿಸಿಯೂಟ ಕೊಡುವುದು, ಸರ್ಕಾರದ ಉಸ್ತುವಾರಿಯಲ್ಲಿಯೇ hand sanitizers ಉತ್ಪಾದನೆ ಮಾಡುವುದು, ಖೈದಿಗಳಿಂದ ಮಾಸ್ಕ್‌ಗಳನ್ನು ಉತ್ಪಾದಿಸುವುದು, ವಿದೇಶದಿಂದ ಬಂದಿರುವವರ ಹಾಗೂ ಬರುತ್ತಿರುವವರ ಬಗ್ಗೆ ವಿಶೇಷ ತಂಡವನ್ನು ರಚಿಸಿದ್ದಾರೆ. ರೋಗಾಣು ಬಾಧಿತದವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ಪಿಂಚಣಿಯನ್ನು ಒದಗಿಸುವುದು, ಮಧ್ಯಮ ವರ್ಗದವರಿಗೆ ಹಾಗೂ ತೊಂದರೆಯಾದವರಿಗೆ ಆಹಾರ ವಿತರಣೆ ಮಾಡುವುದು ಹಾಗೂ ಐಸೋಲೇಷನ್‌ನಲ್ಲಿರುವವರಿಗೆ ಪುಸ್ತಕ ವಿತರಿಸುವುದು, ಸಾವಿರಕ್ಕಿಂತಲೂ ಅಧಿಕ ಹೊಟೇಲ್‌ಗಳಿಂದ ಕೇವಲ 20 ರೂಪಾಯಿಗಳಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ. **(ಗೊಂದಲ)** ಆರೋಗ್ಯ ಪ್ಯಾಕೇಜ್‌ಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಿದ್ದರೆ. ಆದರೆ ನಮ್ಮ ರಾಜ್ಯದಲ್ಲಿ ಯಾವ ರೀತಿಯಾದ ವ್ಯವಸ್ಥೆಯನ್ನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ರೂಪದಲ್ಲಿ ...

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇರಳ ರಾಜ್ಯದವರು ಇಪತ್ತು ಸಾವಿರ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ನಮ್ಮ ರಾಜ್ಯ ಸರ್ಕಾರವು ಕೇವಲ ಎರಡೂವರೆ ಕೋಟಿ ರೂಪಾಯಿಗಳನ್ನು ಮಾತ್ರವೇ ಬಿಡುಗಡೆ ಮಾಡಿದೆ. **(ಗೊಂದಲ)** ಆದರೆ ಕೇಂದ್ರ ಸರ್ಕಾರದಲ್ಲಿ ಎನ್.ಡಿ.ಎ., ಪಕ್ಷವು ....**(ಗೊಂದಲ)**

**ಡಾ|| ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, NDRF and SDRF norms ಅಡಿಯಲ್ಲಿ ಶೇಕಡಾ 25 ರಷ್ಟನ್ನು ಅಂದರೆ ಒಟ್ಟಾರೆಯಾಗಿ ರೂ.374 ಕೋಟಿಗಳನ್ನು ಉಪಯೋಗ ಮಾಡಲು ತಿಳಿಸಿದೆ. **(ಗೊಂದಲ)** This is an insufficient fund. The Government has failed to fight against the COVID-19. The Government has utterly failed in this matter.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಮಾತುಗಳನ್ನು ನಾನು ಒಪ್ಪುತ್ತೇನೆ; ಇಲ್ಲವೆಂದು ಹೇಳುವುದಿಲ್ಲ. ವೆಂಟಿಲೇಟರ್‌ಗಳ ವಿಚಾರ ಬಂದಾಗ, ಇವತ್ತಿನವರೆಗೆ ಯಾವುದೇ ಒಬ್ಬ ರೋಗಿಗೂ ಸಹ ವೆಂಟಿಲೇಟರ್ ಅನ್ನು ಅಳವಡಿಸಲಾಗಿಲ್ಲ. ಇವತ್ತಿನ ದಿವಸ ಕೇಂದ್ರ ಸರ್ಕಾರವು ಒಂದು ಲಕ್ಷ ವೆಂಟಿಲೇಟರ್‌ಗಳನ್ನು ಖರೀದಿಸಬೇಕೆಂದು ಈಗಾಗಲೇ ಆದೇಶಿಸಿದೆ. ಯಾವ್ಯಾವ ರಾಜ್ಯಗಳಲ್ಲಿ ಹಾಗೂ ಎಲ್ಲೆಲ್ಲಿ ವೆಂಟಿಲೇಟರ್‌ಗಳ ಕೊರತೆ ಇದೆಯೋ ಅಲ್ಲೆಲ್ಲಾ ಅವುಗಳನ್ನು ಕಳುಹಿಸಿಕೊಡಲಾಗುವುದು ಎಂಬ ಮಾಹಿತಿಯು ಬಂದಿದೆ. ಇವತ್ತಿನ ಸದ್ಯದ ಪರಿಸ್ಥಿತಿಯಲ್ಲಿ ನಮಗೆ 2,000 ವೆಂಟಿಲೇಟರ್‌ಗಳ ಅವಶ್ಯಕತೆ ಇದೆ ಎನ್ನುವ ಸಂದರ್ಭದಲ್ಲಿ ನಾನು ಮೈಸೂರಿನ Skanray Technologies ಎನ್ನುವ ಕಂಪೆನಿಯೊಂದಿಗೆ ಮಾತನಾಡಿದ್ದೇನೆ. ಇವತ್ತಿನ ದಿವಸ ಬೇರೆ ಬೇರೆ ರಾಷ್ಟ್ರಗಳಲ್ಲಿ ತೊಂದರೆಯಾಗಿದೆ. ಈ ಸಂದರ್ಭದಲ್ಲಿ ವೆಂಟಿಲೇಟರ್‌ಗಳನ್ನು ಸರಬರಾಜು ಮಾಡಲು ಕಷ್ಟವಾಗುತ್ತದೆ ಎನ್ನುವ ಸಂದರ್ಭದಲ್ಲಿ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು video conference ಮುಖಾಂತರ ಮೈಸೂರಿನ Skanray Technologies ಎನ್ನುವ ಕಂಪೆನಿಯ ಎಂ.ಡಿ., ಯವರ ಜೊತೆ ಮಾತನಾಡುವ ಸಂದರ್ಭದಲ್ಲಿ ಅವರು ಸದ್ಯಕ್ಕೆ 2,000 ವೆಂಟಿಲೇಟರ್‌ಗಳನ್ನು ಸರಬರಾಜು ಮಾಡುವುದಾಗಿ ಹೇಳಿದರು. ಇವತ್ತಿನ ದಿವಸ ಅವರಿಗೂ ಸಹ ತೊಂದರೆಯಾಗಿದೆ. ಮುಂದಿನ ದಿನಗಳಲ್ಲಿ ಅವರ ಕಂಪನಿಯು ಪುನಃ ಪ್ರಾರಂಭವಾದಾಗ ಹೆಚ್ಚಿನ ಪ್ರಮಾಣದಲ್ಲಿ ವೆಂಟಿಲೇಟರ್‌ಗಳನ್ನು ಸರಬರಾಜು ಮಾಡುವುದಾಗಿ ಹೇಳಿದ್ದಾರೆ. ಹೀಗಾಗಿ ಇವತ್ತಿನ ಪರಿಸ್ಥಿತಿಯಲ್ಲಿ ನಾವು 2,000 ವೆಂಟಿಲೇಟರ್‌ಗಳನ್ನು ಖರೀದಿ ಮಾಡಲು ಆದೇಶಿಸಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮಂತ್ರಿಗಳು ಮುಗಿಸಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ನಾನು ಮುಗಿಸುತ್ತೇನೆ. **(ಗೊಂದಲ)** ಇವತ್ತಿನ ದಿವಸ ಸರ್ಕಾರ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್‌ಗಳು ಲಭ್ಯ ಇವೆ. ಆ ಪೈಕಿ ಖಾಸಗಿ ಆಸ್ಪತ್ರೆಗಳಲ್ಲಿನ ಶೇಕಡಾ 30 ರಷ್ಟು ವೆಂಟಿಲೇಟರ್‌ಗಳನ್ನು ಮೀಸಲಿಟ್ಟಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರ ಮಾತನ್ನು ನಾನು ಒಪ್ಪುತ್ತೇನೆ. ಹೀಗಾಗಿ ಇವತ್ತಿನ ದಿವಸ ಯಾರಿಗೂ ಸಹ ತೊಂದರೆಯಾಗದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಸಹ ಎಲ್ಲಾ ಅನುದಾನಗಳನ್ನು ಬಿಡುಗಡೆ ಮಾಡಿವೆ. ಅನುದಾನಗಳಲ್ಲಿ ಯಾವುದೇ ಕೊರತೆ ಇಲ್ಲದಂತೆ ಈ ಕೋವಿಡ್–19 ಎಂಬ ಕಾಯಿಲೆಯ ಬಗ್ಗೆ ವಿಶೇಷವಾದ ಗಮನವನ್ನು ಹರಿಸುತ್ತಿದ್ದೇವೆ. ಯಾವುದೇ ರೀತಿಯ ಅನುದಾನಗಳ ಕೊರತೆ ಇಲ್ಲದಂತೆ ಅದು ಎನ್–95 ಮಾಸ್ಕ್ ಆಗಿರಬಹುದು, sanitizers ಆಗಿರಬಹುದು ...

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ ಎನ್ನುವುದನ್ನು ಸರ್ಕಾರವು ತಿಳಿಸಲಿ.

**(ಗೊಂದಲ)**

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಇನ್ನೂರು ಕೋಟಿ ರೂಪಾಯಿಗಳನ್ನು ... **(ಗೊಂದಲ)** ...

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಎಷ್ಟು ಹಣವನ್ನು ಮೀಸಲಿಡಲಾಗಿದೆ?

**(ಗೊಂದಲ)**

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಇವತ್ತಿಗೂ ಸಹ ...

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಇನ್ನೂರು ಕೋಟಿ ರೂಪಾಯಿಗಳು ಎಂಬುದಾಗಿ ಹೇಳುತ್ತಿದ್ದಾರೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(702)24–03–2020(02–00)ಬಿಎಸ್‌ಡಿ–ಎಂಡಿ**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆ?

**ಶ್ರೀ ಬಿ.ಶ್ರೀರಾಮುಲು:–** ರೂ.200 ಕೋಟಿಗಳ ಅನುದಾನವನ್ನು ಕೊಟ್ಟಿದೆ. ಇವತ್ತಿಗೂ ಕೂಡ.....

**(ಗೊಂದಲ)**

**ಡಾ|| ತೇಜಸ್ವಿನಿಗೌಡ:–** ರೂ.200 ಕೋಟಿ ಎಂದು ಹೇಳುತ್ತಿದ್ದಾರೆ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಯವರೆ, ಯಾವುದೇ ಹಣಕಾಸಿನ ತೊಂದರೆಯಿಲ್ಲ, ಸಮಸ್ಯೆಯನ್ನು ಎದುರಿಸಲು ನಾವು war footing ನಂತೆ ತಯಾರಾಗಿದ್ದೇವೆ. ಈ Covid-19 ಅನ್ನು ಎದುರಿಸಲು ಹಣಕಾಸಿನ ತೊಂದರೆ ಇಲ್ಲದಂತೆ ಎದುರಿಸಲು ತಯಾರಾಗಿದ್ದೇವೆ. ರಾಜ್ಯ ಸರ್ಕಾರ ರೂ.200 ಕೋಟಿ ಕೊಟ್ಟಿದೆ. ಕೇಂದ್ರ ಸರ್ಕಾರವು ರೂ.150 ಕೋಟಿಗಳ ಅನುದಾನವನ್ನು ಕೊಟ್ಟಿದೆ, ಯಾವುದೇ ತೊಂದರೆಯಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಶಾಸಕರು ಇದನ್ನು ಎದುರಿಸಲು ಹಣಕಾಸಿನ ತೊಂದರೆ ಇಲ್ಲದಂತೆ .....

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೇರಳದವರು ಇದಕ್ಕಾಗಿ ರೂ.20 ಸಾವಿರ ಕೋಟಿಗಳನ್ನು ಮೀಸಲಾಗಿಟ್ಟಿದ್ದಾರೆ.ಇಲ್ಲಿ ಒಂದು ಸ್ವಲ್ಪ ಹಣವೂ ಬಿಡುಗಡೆಯಾಗಿಲ್ಲ.

**(ಗೊಂದಲ)**

**ಶ್ರೀ ಬಿ.ಶ್ರೀರಾಮುಲು:–** ನಾವು order ಕೂಡ place ಮಾಡಿದ್ದೇವೆ, ಆದಷ್ಟು ಶೀಘ್ರದಲ್ಲಿ ಪೂರೈಕೆ ಮಾಡಬೇಕು, Ventilator, Masks, PPE (Personal Protection Equipment) Kit ಇವುಗಳೆಲ್ಲವನ್ನೂ ಸಪ್ಲೈ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ರಾಜ್ಯದಲ್ಲಿ ಮೊದಲನೆಯ death ಗುಲ್ಬರ್ಗದಲ್ಲಿ ಆಯಿತು. ಅಲ್ಲಿ Laboratory, Ventilator, N-95 Masks ಗಳೆಲ್ಲವೂ ಇಲ್ಲ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ ತೇಜಸ್ವಿನಿಗೌಡ:–** ಇದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಇಟಲಿ ಪ್ರಧಾನ ಮಂತ್ರಿಗಳು ಶರಣಾಗಿದ್ದಾರೆ, ಇವರು ಈಗ ಶರಣಾಗಿದ್ದಾರೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕನಿಷ್ಠ ರೂ.10 ಸಾವಿರಗಳನ್ನು ಕೊಡಬೇಕು, ಏಕೆಂದರೆ ನಗರದ ಜನರು ಹಳ್ಳಿಗಳ ಕಡೆ ಹೋಗಿದ್ದಾರೆ. ಉಚಿತ ಚಿಕಿತ್ಸೆ ಕೊಡಬೇಕು, ಅವರು ಬದುಕಬೇಕಲ್ಲವೇ? ಅವರು ತಿಂಡಿ, ಊಟ ಮಾಡಬೇಕಲ್ಲವೇ?

**(ಗೊಂದಲ)**

**ಶ್ರೀ ಬಿ.ಶ್ರೀರಾಮುಲು:–** ಈಗ ರೂ.200 ಕೋಟಿ ಕೊಟ್ಟಿದ್ದೇವೆ, ಯಾವುದೇ ತೊಂದರೆಯಾಗದಂತೆ ಹಣಕಾಸಿನ ವ್ಯವಸ್ಥೆ ಮಾಡುತ್ತೇವೆ.

**(ಗೊಂದಲ)**

## 4. ಪ್ರಕಟಣೆಗಳು

**ಸಭಾಪತಿಯವರು:–** ವಿಧಾನ ಪರಿಷತ್ತಿನ 140ನೆಯ ಅಧಿವೇಶನದಲ್ಲಿ ದಿನಾಂಕ 11–03–2020ರಂದು ಮಾನ್ಯ ಶಾಸಕರಾದ ಶ್ರೀ ಹೆಚ್.ಎಂ.ರೇವಣ್ಣ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 100 (812)ರಲ್ಲಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ ಕ್ಲಬ್‌ಗಳಿಗೆ ಸರ್ಕಾರದ ವತಿಯಿಂದ ಮಂಜೂರು ಮಾಡಿರುವ ನಿವೇಶನಗಳ ವಿವರ, ಕ್ಲಬ್‌ಗಳಲ್ಲಿ ಸದಸ್ಯತ್ವವನ್ನು ಹೊಂದಲು ನಿಗದಿಪಡಿಸಿರುವ ಅರ್ಹತೆ ಹಾಗೂ ವಸ್ತ್ರ ಸಂಹಿತೆ ಕುರಿತು ಚರ್ಚಿಸುವ ಸಂದರ್ಭದಲ್ಲಿ **ಮಾನ್ಯ ಸಹಕಾರ ಸಚಿವರು ಸದರಿ ವಿಷಯವನ್ನು ಪರಿಶೀಲಿಸಲು ಸದನ ಸಮಿತಿಯನ್ನು ರಚಿಸಲು ಸಹಮತಿ ನೀಡಿರುತ್ತಾರೆ ಹಾಗೂ ಈ ಸಂಬಂಧ ಪತ್ರವನ್ನು ನೀಡಿರುತ್ತಾರೆ.**

ದಿನಾಂಕ 13–03–2020ರಂದು ಮಾನ್ಯ ಶಾಸಕರಾದ ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 133 (959)ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯು ವಿವಿಧ ವಿಭಾಗಗಳಲ್ಲಿ ಬಿಡುಗಡೆಯಾಗಿದ್ದ ಅನುದಾನವನ್ನು ಬಳಕೆ ಮಾಡಿಕೊಳ್ಳದೆ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸದರಿ ವಿಷಯವನ್ನು ಪರಿಶೀಲಿಸಲು ಸದನ ಸಮಿತಿಯನ್ನು ರಚಿಸಲು ಸಹಮತಿ ನೀಡಿರುತ್ತಾರೆ.**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ **ನಿಯಮ 242(ಎ) ರ ರೀತ್ಯಾ ಸದನ ಸಮಿತಿಗಳನ್ನು ರಚಿಸಲಾಗಿರುತ್ತದೆ** ಎಂದು ಸದನದ ಗಮನಕ್ಕೆ ತರಲಾಗಿದೆ.

ಸಮಿತಿಯಲ್ಲಿರುವ ಸದಸ್ಯರು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ತದನಂತರ ತಿಳಿಸಲಾಗುವುದು.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ರೂ.200 ಕೋಟಿಗಳು ಸಾಕಾಗುವುದಿಲ್ಲ. ರೂ.10 ಸಾವಿರ ಕೋಟಿಗಳು ಬೇಕಾಗುತ್ತದೆ. ಅದನ್ನೇ ಅಹೋಲಬೋ ಎಂದು ಬಡಿದುಕೊಳ್ಳುತ್ತಾ ಹೇಳುತ್ತಿರುವುದು.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಎರಡೂವರೆ ಗಂಟೆಯವರೆಗೆ ಮುಂದೂಡುತ್ತೇನೆ.

(703) 24.03.2020 2.40 ಕೆಜಿ–ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**(ಮಧ್ಯಾಹ್ನ 2 ಗಂಟೆ 5 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 2 ಗಂಟೆ 40 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತು ಪಡಿಸಿ, ಉಳಿದ ಕಾಂಗ್ರೆಸ್ ಮತ್ತು ಜೆಡಿ (ಎಸ್) ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು:–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತಿದ್ದೇನೆ:

1) ಕರ್ನಾಟಕ ಧನವಿನಿಯೋಗ ವಿಧೇಯಕ, 2020
2) ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2020
3) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2020

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರು reply ಮಾಡುವುದಕ್ಕೆ ಸದನಕ್ಕೆ ಬಂದಿದ್ದಾರೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಬಾವಿಯಲ್ಲಿ ಧರಣಿ ಮಾಡುವುದು ಸರಿಯಲ್ಲ. ಅವರಿಗೆ ಗೌರವ ಕೊಡಬೇಕು ಅಲ್ಲವೇ; ಮಾನ್ಯ ಮುಖ್ಯ ಮಂತ್ರಿಯವರು reply ಕೊಟ್ಟ ಮೇಲೆ ಚರ್ಚೆ ಮಾಡೋಣ. ದಯವಿಟ್ಟು ಅವರನ್ನು ಬಾವಿಯಿಂದ ಹೊರಗೆ ಬರುವಂತೆ ಹೇಳಿ.

**ಶ್ರೀಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿಧೇಯಕವನ್ನು ಪಾಸು ಮಾಡಿಕೊಡುವುದಕ್ಕೆ ತೊಂದರೆ ಇಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರವರ ಜಾಗದಲ್ಲಿ ಕುಳಿತುಕೊಂಡು ಬಿಲ್ಲನ್ನು ಪಾಸು ಮಾಡಿಕೊಡಲಿ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದ ನಾಯಕರಾಗಿದ್ದಂತಹ ಸಂದರ್ಭದಲ್ಲಿ, ಅವರೇ ಲ್ಯಾಪ್‌ಟಾಪ್ ಖರೀದಿ ಬಗ್ಗೆ ಎತ್ತಿದಂತಹ ಪ್ರಶ್ನೆ ಇದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**6. ಶಾಸನ ರಚನೆ**

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಅ) ಕರ್ನಾಟಕ ಧನವಿನಿಯೋಗ ವಿಧೇಯಕ, 2020

**ಪರ್ಯಾಲೋಚನ ಪ್ರಸ್ತಾವ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ವಿವರವಾದ reply ಅನ್ನು ಮಾಡುತ್ತೇನೆ. ಇದರ ಎಲ್ಲಾ ಮಾಹಿತಿಗಳನ್ನು ಸದನಕ್ಕೆ ಕೊಡುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## ಆ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ–2) ವಿಧೇಯಕ, 2020

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನನ್ನ ಎರಡು–ಮೂರು clarifications ಆಗಬೇಕಾಗಿದೆ. ನಾನು ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಎರಡು–ಮೂರು ಸ್ಪಷ್ಟನೆಗಳನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:–** ಸದಸ್ಯರೇ, ಮಾನ್ಯ ಮುಖ್ಯ ಮಂತ್ರಿಯವರು ಇನ್ನೂ ಮಾತನಾಡಲೇ ಇಲ್ಲ. ಆಗಲೇ ಹೇಗೆ ಸ್ಪಷ್ಟನೆಗಳನ್ನು ಕೇಳುತ್ತೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವುದಾದರೆ ಮಾತನಾಡಲಿ.

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಸವಿಸ್ತಾರವಾಗಿ 2020–2021ನೇ ಸಾಲಿನ ಆಯವ್ಯಯದ ಮೇಲೆ ಉತ್ತರವನ್ನು ಕೊಡುತ್ತೇನೆ. ಆ ನಂತರ ಏನಾದರೂ clarifications ಇದ್ದರೆ ಕೇಳಬಹುದು. ಅದನ್ನು ಮಂಡಿಸುತ್ತಿದ್ದೇನೆ. ಎಲ್ಲರೂ ದಯವಿಟ್ಟು ಸಹಕರಿಸಬೇಕು.

ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ಬಾವಿಯಲ್ಲಿ ಧರಣಿ ನಿರತರಾಗಿರುವ ಸದಸ್ಯರು ಅವರವರ ಜಾಗಗಳಲ್ಲಿ ಕುಳಿತುಕೊಳ್ಳದ ಹೊರತು, ನಾನು ಮಾತನಾಡುವುದು ಸರಿ ಎನಿಸುತ್ತಿಲ್ಲ. ನಾನು ಉತ್ತರ ಕೊಟ್ಟ ನಂತರ ಅವರು ಧರಣಿಯನ್ನು ಮುಂದುವರಿಸಲಿ. ಈ ವಿಷಯದ ಚರ್ಚೆಯ ಕಾಲದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಎಸ್.ಆರ್.ಪಾಟೀಲ್‌ರವರು ಸೇರಿದಂತೆ, ಅನೇಕ ಮಾನ್ಯ ಸದಸ್ಯರುಗಳು ಮಾಡಿರುವಂತಹ ಟೀಕೆಟಿಪ್ಪಣಿಗಳು ಹಾಗೂ ಸಲಹೆ ಸೂಚನೆಗಳನ್ನು ಗಮನಿಸಿದ್ದೇನೆ. ಅವುಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇನೆ. ಕೋವಿಡ್–19 ಕಾರಣಕ್ಕೆ ಇಡೀ ರಾಜ್ಯದ ಜನತೆ ಆತಂಕದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ನಾನು ಅಧಿಕಾರ ಸ್ವೀಕರಿಸಿದಾಗ ಈ ವರ್ಷದಲ್ಲಿ ಅಭಿವೃದ್ಧಿಯನ್ನು ತ್ವರಿತಗತಿಯಲ್ಲಿ ತೆಗೆದುಕೊಂಡು ಹೋಗುವಂತಹ ಕನಸಿನಲ್ಲಿ ನಾನು ಅಧಿಕಾರವನ್ನು ಸ್ವೀಕರಿಸಿದೆ. ಆದರೆ, ನಾನು ಅಧಿಕಾರ ತೆಗೆದುಕೊಂಡ ಒಂದು ವಾರದಲ್ಲಿ ರಾಜ್ಯವು 117 ವರ್ಷಗಳಲ್ಲಿ ಕಂಡರಿಯದ ಅತಿವೃಷ್ಟಿಗೆ ಒಳಗಾಯಿತು. ಆಗ ನಾನು ಸರ್ಕಾರದಲ್ಲಿ ಒಬ್ಬನೇ ಇದ್ದರೂ ಸಹ, ರಾಜ್ಯವನ್ನು ಹಗಲಿರುಳು ಸುತ್ತಿ ಅತಿವೃಷ್ಟಿಗೊಳಗಾದ ಜನತೆಗೆ ಪರಿಹಾರವನ್ನು ಒದಗಿಸಿದ್ದೇನೆ. ನಮ್ಮ ದೇಶದ ಇತಿಹಾಸದಲ್ಲಿ ಯಾವುದೇ ರಾಜ್ಯದಲ್ಲಿ ಕೊಡದಷ್ಟು ಪರಿಹಾರವನ್ನು ಮನೆ ಕಳೆದುಕೊಂಡವರಿಗೆ ಕೊಟ್ಟಿದ್ದೇನೆ. ಇದರ ಜೊತೆಗೆ ರೈತರ ಬೆಳೆಹಾನಿಗೆ ಕೇಂದ್ರ ಸರ್ಕಾರ ಕೊಡುವ ರೂ.6,500/–, ರೂ.13,500/– ಮತ್ತು ರೂ.18,500/– ಬೆಳೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾನಿಯ ಪರಿಹಾರದ ಜೊತೆಗೆ ನಾವು ರೂ.10,000/- ಗಳನ್ನು ಸೇರಿಸಿಕೊಟ್ಟಿದ್ದೇವೆ. ನಾವು ಕೊಟ್ಟಿರುವಂತಹ ರೈತರ ಬೆಳೆ ಹಾನಿಯ ಪರಿಹಾರವು ನಮ್ಮ ದೇಶದ ಇತಿಹಾಸದಲ್ಲಿಯೇ ಮೊದಲನೆಯದು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಅತಿವೃಷ್ಟಿಯನ್ನು ನಿಭಾಯಿಸುವುದಕ್ಕೆ ಸುಮಾರು ಎರಡು ತಿಂಗಳು ಕಳೆದು ಹೋಯಿತು. ನಮ್ಮ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ನಡೆಸುವ ಇಚ್ಚೆಯಿಂದ ಎಲ್ಲಾ ಇಲಾಖೆಗಳ ಕಾರ್ಯಪ್ರಗತಿಯನ್ನು ಪರಿಶೀಲಿಸಿ ವಿವಿಧಕ್ರಮಗಳನ್ನು ಕೈಗೂಳ್ಳಲಾಯಿತು. ನಮಗೆ ಇದ್ದ ಇತಿಮಿತಿಯಲ್ಲಿ 2020-2021 ನೇ ಸಾಲಿನ ರಾಜ್ಯದ ಆಯವ್ಯಯವನ್ನು ತಯಾರು ಮಾಡುವ ನಿಟ್ಟಿನಲ್ಲಿ ಒಂದು ವಿಶೇಷ ಪ್ರಯತ್ನಕ್ಕೆ ಕೈಹಾಕಲಾಯಿತು. ಎಲ್ಲಾ ಇಲಾಖೆಗಳು ಮತ್ತು ಕ್ಷೇತ್ರಗಳನ್ನು ಮುಖ್ಯವಾಗಿ ಆರು ವಲಯಗಳನ್ನಾಗಿ ವಿಂಗಡಿಸಲಾಯಿತು. ಆಯವ್ಯಯವನ್ನು ಪ್ರತಿ ವರ್ಷದಂತೆ ಸಾಂಪ್ರದಾಯಿಕವಾಗಿ ಮಂಡಿಸದೇ, ಒಂದು ಹೊಸ ರೂಪ ಕೊಟ್ಟು ವಲಯಗಳ ರೂಪದಲ್ಲಿ ಮಾರ್ಪಡಿಸಲಾಯಿತು. ಇದಕ್ಕೆ ಕಾರಣ ಅಭಿವೃದ್ಧಿಗೆ ತೀವ್ರತೆ ನೀಡುವ ಉದ್ದೇಶ ನನ್ನದಾಗಿತ್ತು.

ಮಾನ್ಯ ಸಭಾಪತಿಯವರೇ, ನಾನು ಆಯವ್ಯಯದ ಮೇಲೆ ಚರ್ಚೆಗೆ ಉತ್ತರಿಸುವ ಮೊದಲು ಒಂದು ವಿಷಯವನ್ನು ಹೇಳಲೇಬೇಕು. ನಾನು ಅಧಿಕಾರ ಸ್ವೀಕರಿಸಿದಾಗ ಯಾವ ಅತಂಕದ ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಈಗ ಮತ್ತೆ ತಲೆದೋರಿದೆ.

**(ಮುಂದು. . .)**

(704) 24-03-2020(2-50)ಎಂವಿ-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಂದು...):-**

ಕೋವಿಡ್-19 ಎಂಬ ವೈರಾಣು ಪೆಡಂಭೂತವಾಗಿ ರಾಜ್ಯದ ಜನತೆ ಅಷ್ಟೇ ಅಲ್ಲದೆ ಇಡೀ ವಿಶ್ವವನ್ನೇ ಕಾಡುತ್ತಿದೆ. ಒಂದು ತಿಂಗಳ ಹಿಂದೆ ಕೋವಿಡ್-19ರ ವರದಿ ಬಂದಾಗ ಅಷ್ಟೊಂದು ತಲೆ ಕೆಡಿಸಿಕೊಳ್ಳಲಿಲ್ಲ. ಹಾಗಂತ ನಾವು ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳಲಿಲ್ಲ. ಸರ್ಕಾರ ಕೋವಿಡ್-19ರ ನಿಯಂತ್ರಣಕ್ಕಾಗಿ ಸುಮಾರು 200 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದೆ. ನಮ್ಮ ಮಂತ್ರಿಗಳು, ಅಧಿಕಾರಿಗಳು, ಪೊಲೀಸ್ ಸಿಬ್ಬಂದಿಗಳು, ವೈದ್ಯಕೀಯ ಸೇವೆಯಲ್ಲಿ ತೊಡಗಿಸಿಕೊಂಡ ಜನ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈದ್ಯರೊಂದಿಗೆ ಎಲ್ಲರೂ ಕೋವಿಡ್-19 ವೈರಾಣುವನ್ನು ತಡೆಗಟ್ಟುವಲ್ಲಿ ತೊಡಗಿದ್ದಾರೆ. ಇದು ತಮಗೆ ಗೊತ್ತಿರಲಿ. ದೇಶದಲ್ಲಿ ಕೋವಿಡ್-19ರ ಮೊದಲ ಸಾವು ಕರ್ನಾಟಕದಲ್ಲಿ ಆದರೂ ಸಹ, ನಾವು ಒಂದು ಹಂತಕ್ಕೆ ವೈರಾಣು ಹರಡುವುದನ್ನು ತಡೆಹಿಡಿದಿದ್ದೇವೆ. ಇದಕ್ಕೆ ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಸಹ ಕರ್ನಾಟಕದ ಕ್ರಮಗಳನ್ನು ಪ್ರಶಂಸೆ ಮಾಡಿದ್ದಾರೆ. ನಮಗೆ ಈಗ ಒಂದು ರೀತಿಯ ಪರೀಕ್ಷಾ ಸಮಯ. ನಾವು ಕೋವಿಡ್-19ರ ನಿಯಂತ್ರಣದ ಎರಡನೇ ಹಂತದಲ್ಲಿದ್ದೇವೆ. ಈ ರೋಗ ಮೂರು ಮತ್ತು ನಾಲ್ಕನೇ ಹಂತಕ್ಕೆ ತಲುಪಬಾರದು. ಇದು ಮೂರನೇ ಹಂತಕ್ಕೆ ತಲುಪದಂತೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇದನ್ನು ನನ್ನ ಮನಃಸಾಕ್ಷಿಯಾಗಿ ಹೇಳುತ್ತಿದ್ದೇನೆ. ದೇವರ ದಯೆಯಿಂದ ರಾಜ್ಯದ ಜನತೆಗೆ ವೈರಾಣು ಹೈರಾಣು ಮಾಡದಂತೆ ತಡೆದಿದ್ದೇವೆ. ರಾಜ್ಯದ ಜನತೆ ಈ ರೋಗದ ಆತಂಕದಿಂದ ಹೊರ ಬರುತ್ತಾರೆ ಎಂಬ ನಂಬಿಕೆ ಮತ್ತು ದೃಢವಾದ ವಿಶ್ವಾಸ ನನ್ನಲ್ಲಿದೆ. ನಮ್ಮ ಸರ್ಕಾರ ಕೋವಿಡ್-19ರ ಸೋಂಕಿಗೆ ಒಳಗಾದ ಬಡವರಿಗೆ ಹಲವಾರು ಸಹಾಯಗಳನ್ನು ಮಾಡುತ್ತಿದೆ.ಮೊದಲನೆಯದಾಗಿ, ಬಡವರಿಗೆ ಎರಡು ತಿಂಗಳ ಸಾಮಾಜಿಕ ಭದ್ರತಾ ಪಿಂಚಣಿಗಳನ್ನು ಮುಂಗಡವಾಗಿ ಬಿಡುಗಡೆ ಮಾಡುತ್ತೇವೆ.ನರೇಗಾ ಅಡಿಯಲ್ಲಿ ಯೋಜನೆಗಳ ಹೆಚ್ಚುವರಿ ಮಾನವ ದಿನಗಳ ಬಾಬ್ತು ಮುಂಗಡ ಹಣವನ್ನು ಬಿಡುಗಡೆ ಮಾಡುತ್ತೇವೆ. ಸುಮಾರು 21 ಲಕ್ಷ ಕಟ್ಟಡ ಕಾರ್ಮಿಕರಿಗೆ ತಿಂಗಳಿಗೆ ತಲಾ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸರ್ಕಾರ "ಬಡವರ ಬಂಧು" ಸಾಲದ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ಸುಮಾರು 15,120 ಜನರಿಗೆ ಸುಮಾರು 9.10 ಕೋಟಿ ರೂಪಾಯಿಗಳು ಮತ್ತು 2019-2020ನೇ ಸಾಲಿನಲ್ಲಿ ಸುಮಾರು 6,500 ಜನರಿಗೆ ಸುಮಾರು 5.16 ಕೋಟಿ ರೂಪಾಯಿಗಳು. ಒಟ್ಟು 13.20 ಕೋಟಿ ಹಣ ಏನಿದೆ, ಅದನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು ಎನ್ನುವಂತಹ ತೀರ್ಮಾನವನ್ನು ಮಾಡಿದ್ದೇವೆ. ಇಂತಹ ಸಂಕಷ್ಟದ ಸಮಯದಲ್ಲಿ ನನಗೆ ವಿರೋಧ ಪಕ್ಷದವರೆಲ್ಲರೂ ಸಹ ಸಹಕಾರ ನೀಡುತ್ತಿದ್ದಾರೆ. ಆದುದರಿಂದ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುತ್ತಾ, ಯಾವುದೇ ಸುಸ್ಥಿರ ಯೋಜನೆಗಳು ಬಜೆಟ್‌ನಲ್ಲಿ ಇಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ರಾಜ್ಯ ಜಿ.ಎಸ್.ಟಿ. ಸಂಗ್ರಹದಲ್ಲಿ ರಾಷ್ಟ್ರದಲ್ಲಿ ಎರಡನೇ ಸ್ಥಾನದಲ್ಲಿದ್ದರೂ ಸಹ 15ನೇ ಹಣಕಾಸು ಆಯೋಗದ ವರದಿಯ ಪ್ರಕಾರ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ 8,887/- ಕೋಟಿ ರೂಪಾಯಿ ಮತ್ತು ಜಿ.ಎಸ್.ಟಿ. ಪರಿಹಾರ 3,000/- ಕೋಟಿ ರೂಪಾಯಿ ಕಡಿತವಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ನನ್ನ ಉತ್ತರ ಏನೆಂದರೆ, ರಾಜ್ಯದ ತೆರಿಗೆ ಸಂಗ್ರಹದಲ್ಲಿ 2020-2021ರ ಗುರಿಯ ಸಮೀಪದಲ್ಲಿದ್ದೇವೆ ಮತ್ತು ಕೇಂದ್ರದಿಂದ ಕಡಿತವಾಗಿದ್ದ 11,887/- ಕೋಟಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳನ್ನು ಪಡೆಯುವುದಕ್ಕೆ ಈಗಾಗಲೇ ನಾನು ಕೇಂದ್ರ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರ ಜೊತೆಯಲ್ಲಿ ಮಾತನಾಡಿದ್ದೇನೆ. ನಮ್ಮ ಹಣ ನಮಗೆ ಬರುತ್ತದೆ ಎಂಬ ಸಂಪೂರ್ಣ ವಿಶ್ವಾಸವಿದೆ. ಕರ್ನಾಟಕ ಅಭಿವೃದ್ಧಿ ಹೊಂದಿದ ರಾಜ್ಯವಾಗಿರುವ ಕಾರಣಕ್ಕೆ ಇದರ ಬೆಲೆಯನ್ನು ತೆರಬೇಕಾಗಿದೆ. ಆದರೆ, ಕೇಂದ್ರದ ಹಣಕಾಸು ಸಚಿವರ ಜೊತೆಯಲ್ಲಿ ಮಾತುಕತೆ ಮಾಡಿದ್ದು, ನಮಗೆ ನ್ಯಾಯ ಒದಗಿಸುವ ಆಶ್ವಾಸನೆ ಸಿಕ್ಕಿದೆ.

ನನ್ನ ಆದ್ಯತೆ ಕೃಷಿ ಮತ್ತು ನೀರಾವರಿ. ಆರ್ಥಿಕ ಇತಿಮಿತಿಯಲ್ಲೂ ಕೂಡ ನೀರಾವರಿಗೆ ಪ್ರಸ್ತುತ ವರ್ಷಕ್ಕೆ 21,308/- ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಇದಲ್ಲದೆ ಕೃಷ್ಣ ಮೇಲ್ದಂಡೆ ಯೋಜನೆ ಮೂರನೇ ಹಂತದ ಅನುಷ್ಠಾನಕ್ಕಾಗಿ ಅದರಲ್ಲೂ ವಿಶೇಷವಾಗಿ 21 ಗ್ರಾಮಗಳ ಪುನರ್ವಸತಿ ಕಾರ್ಯಕ್ರಮ ಕೈಗೊಳ್ಳುವುದಕ್ಕೋಸ್ಕರ, 10,000/- ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಶ್ರೀ ಬ್ರಿಜೇಶ್ ಕುಮಾರ್ ನೇತೃತ್ವದ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ 2013ರಲ್ಲಿ ಹೆಚ್ಚುವರಿ ನೀರನ್ನು ಬಳಕೆ ಮಾಡುವ ಬಗ್ಗೆ ವರದಿ ಕೊಟ್ಟ ನಂತರ ಬಂದ ಯಾವುದೇ ಸರ್ಕಾರವು ಅನುದಾನ ಒದಗಿಸದೇ ಇರುವ ಕಾರಣ ಪುನರ್ವಸತಿ ವೆಚ್ಚ ಸುಮಾರು ಆರು ಪಟ್ಟು ಹೆಚ್ಚಾಗಿದೆ. ಉತ್ತರ ಕರ್ನಾಟಕ ಭಾಗದ ರೈತರಿಗೆ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ.ಈ ವರ್ಷ ಪುನರ್ವಸತಿ ಕಾರ್ಯವನ್ನು ಪ್ರಾರಂಭ ಮಾಡಬೇಕು ಎನ್ನುವ ನಿಶ್ಚಯವನ್ನು ಮಾಡಿದ್ದೇನೆ. ಉತ್ತರ ಕರ್ನಾಟಕದ ಪ್ರತಿಷ್ಠಿತ ಮಹದಾಯಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಅವಶ್ಯಕವಾಗಿರುವ ಅಧಿಸೂಚನೆಯನ್ನು ಕೇಂದ್ರ ಸರ್ಕಾರದವರು ಹೊರಡಿಸಿದ್ದು, ಅದಕ್ಕೆ ನಾನು ಕೇಂದ್ರ ಸರ್ಕಾರವನ್ನು ಅಭಿನಂದಿಸುತ್ತೇನೆ. 2020-2021ನೇ ಸಾಲಿನಲ್ಲಿ ಈ ಯೋಜನೆಯ ಪ್ರಗತಿ ಸಾಧಿಸುವುದಕ್ಕೆ ಸುಮಾರು 500/- ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಬರಪೀಡಿತ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆಯ ಸಲುವಾಗಿ ಸುಮಾರು 1,500/- ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಏತ ನೀರಾವರಿಗಾಗಿ ಪ್ರಥಮ ಬಾರಿಗೆ ಸುಮಾರು 5,000/- ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಅವುಗಳನ್ನು ಪ್ರಮಾಣಕವಾಗಿ ಅನುಷ್ಠಾನಗೊಳಿಸಲಾಗುವುದು. ಕೃಷಿಗೆ ಉತ್ತೇಜನ ನೀಡುವುದಕ್ಕೋಸ್ಕರ, ನಾನು ಒಂದು ಮಾತನ್ನು ಇಲ್ಲಿ ಹೇಳಲೇಬೇಕು. ದೇಶದ ಇತಿಹಾಸದಲ್ಲಿ ಕೇಂದ್ರದ ಆಯವ್ಯಯದಲ್ಲಿ ಕೃಷಿಗೆ ಶೇಕಡಾ 9.5ರಷ್ಟು ಹಣವನ್ನು ಮೀಸಲಿರಿಸಲಾಗಿದೆ. ಅಂದರೆ, 2.83 ಲಕ್ಷ ಕೋಟಿ ರೂಪಾಯಿಗಳನ್ನು ಕೃಷಿ ಕ್ಷೇತ್ರಕ್ಕೆ ಒದಗಿಸಲಾಗಿದೆ.ಇದರ ಫಲ ರಾಜ್ಯಕ್ಕೂ ಲಭಿಸಲಿದೆ. "ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ" ಯಡಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಕೇಂದ್ರ ಸರ್ಕಾರದ 6,000/- ರೂಪಾಯಿಗಳ ಜೊತೆಗೆ ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು 4,000/- ರೂಪಾಯಿಗಳ ಹೆಚ್ಚುವರಿ ನೆರವನ್ನು ಘೋಷಿಸಿ, ಈವರೆಗೆ ಸುಮಾರು 41 ಲಕ್ಷ ಬ್ಯಾಂಕ್ ಖಾತೆಗಳಿಗೆ 825/- ಕೋಟಿ ರೂಪಾಯಿಗಳನ್ನು ರಾಜ್ಯದ ವತಿಯಿಂದ ವರ್ಗಾಯಿಸಲಾಗಿದೆ. ಈ ಯೋಜನೆಯನ್ನು ಮುಂದುವರೆಸಲು 2020-21ನೇ ಸಾಲಿನಲ್ಲಿ 2,600/- ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು. ಕರ್ನಾಟಕದಲ್ಲಿ ಶೇಕಡಾ 75ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದಾರೆ. ರಾಜ್ಯದ ಕೃಷಿ ಪದ್ಧತಿಯು ಬಹುತೇಕ ಮಳೆಯಾಧಾರಿತವಾಗಿರುವುದರಿಂದ ತೋಟಗಾರಿಕಾ ಬೆಳೆಗಳ ಪ್ರದೇಶವನ್ನು ವಿಸ್ತರಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ. ತೋಟಗಾರಿಕೆ ಕೃಷಿ ಪದ್ಧತಿಗೆ ವರ್ಗಾವಣೆಗೊಳ್ಳಲು ಸಣ್ಣ ಮತ್ತು ಅತಿ ಸಣ್ಣ ರೈತರು ಇಚ್ಛಿಸಿದಲ್ಲಿ ಅವರಿಗೆ ಬೀಜ, ರಸಗೊಬ್ಬರ ಖರೀದಿ, ಕೃಷಿ ಕಾರ್ಮಿಕರ ವೆಚ್ಚ ಭರಿಸಲು ಅನುಕೂಲವಾಗುವಂತೆ ಒಂದು ಸಮಗ್ರ ಯೋಜನೆಯನ್ನು ರೂಪಿಸಲಾಗುವುದು. ಈ ಯೋಜನೆಯಡಿಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರು ಹೊಸದಾಗಿ ತೋಟಗಾರಿಕೆ ಕೃಷಿ ಪದ್ಧತಿಗೆ ವರ್ಗಾವಣೆಗೊಂಡಲ್ಲಿ ಪ್ರತಿ ಹೆಕ್ಟೇರಿಗೆ 5,000/- ರೂಪಾಯಿಗಳಂತೆ ಗರಿಷ್ಠ 10,000/- ರೂಪಾಯಿಗಳ ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ಬಹಳ ಉತ್ತಮ ರೀತಿಯಲ್ಲಿ ಉತ್ತರವನ್ನು ಕೊಡುತ್ತಿದ್ದಾರೆ. ಈಗ ಎರಡೂ ವಿರೋಧ ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿದ್ದಾರೆ. ನಮ್ಮ ಬೇಡಿಕೆ ಇಷ್ಟೆ. ಲ್ಯಾಪ್‌ಟಾಪ್ ಹಗರಣಕ್ಕೆ ಸಂಬಂಧಪಟ್ಟಂತೆ ಒಂದು ಸದನ ಸಮಿತಿ ರಚನೆ ಮಾಡಿ ಎಂದು ಕೇಳಿದ್ದೆವು.

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈ ವಿಷಯ ಮುಗಿದಮೇಲೆ ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಆದರೆ, ಅದಕ್ಕೆ ಸಕಾರಾತ್ಮಕವಾಗಿ ಉತ್ತರ ಬಂದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಈ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳು, ನಮಗೆ ಅವರ ಬಗ್ಗೆ ಗೌರವವಿದೆ.

**ಶ್ರೀ ಬಿ.ಎಸ್.ಯಡಿಯೂರಪ್ಪ:-** ಮಾನ್ಯ ಸಭಾಪತಿಯವರೇ, ಈ ದಾಖಲೆಗಳು ರೆಕಾರ್ಡ್‌ಗೆ ಹೋಗಬೇಕಾಗಿರುವುದರಿಂದ, ಸಂಪೂರ್ಣವಾದ ದಾಖಲೆಗಳನ್ನು ಅವರಿಗೆ ಕೊಡುತ್ತೇನೆ. ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲೆಗಳಿಗೆ ಹೋಗಲಿ. ನನಗೆ ಅವರ ಸಹಕಾರವಿದ್ದರೆ ಈ ಬಜೆಟ್‌ಗೆ ಅನುಮೋದನೆಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2ರಿಂದ 3ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2ರಿಂದ 3ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 3ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಶ್ರೀ ಎಸ್.ಆರ್.ಪಾಟೀಲ್:–**ಮಾನ್ಯ ಸಭಾಪತಿಯವರೇ, ಈಗ ರೈತರ ಸಾಲ ಮರುಪಾವತಿ 31ನೇ ಮಾರ್ಚ್‌ವರೆಗೆ ಇತ್ತು. ಈ ಕೋವಿಡ್–19 ವೈರಾಣುವಿನ ಈಗಿನ ಪರಿಸ್ಥಿತಿಯಲ್ಲಿ ಅದನ್ನು ಕನಿಷ್ಠ ಪಕ್ಷ extend ಮಾಡುವಂತಹ ನಿರ್ಣಯವನ್ನು ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. The last date for payment was 31st of March.

**ಶ್ರೀ ಕೆ.ಟಿ.ಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಜನ ಕೊರೊನಾದ ಆತಂಕದಲ್ಲಿದ್ದಾರೆ.

**(ಮುಂದು...)**

(705) & (706) 24.03.2020 03.00& 03.10 LL-YL-BNS

**(ಸಭಾಪತಿಯವರ ಉಪಸ್ಥಿತಿ)**

**ಇ)ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ)ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, 2020ರ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ, 2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>**

**<u>ಖಂಡ 2</u>**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ
2020ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ
ನಿರ್ಧರಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**7. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 24 ನೇ ಮಾರ್ಚ್, 2020 ಸಮೂಹ–2ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 75 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ದಿನಾಂಕ 2ನೇ ಮಾರ್ಚ್, 2020, ಸಮೂಹ–1ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 110 ಪ್ರಶ್ನೆಗಳ ಪೈಕಿ 104 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ನಿಯಮ 72 ಮತ್ತು ನಿಯಮ 330ರಡಿಯಲ್ಲಿ ಸ್ವೀಕರಿಸಲಾದ ಸೂಚನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:**–ಮಾನ್ಯ ಸಭಾಪತಿಯವರೇ,ನಿಯಮ 72ರಡಿಯಲ್ಲಿ ಸ್ವೀಕರಿಸಲಾದ ಒಟ್ಟು 204 ಸೂಚನೆಗಳ ಪೈಕಿ 71 ಸೂಚನೆಗಳಿಗೆ ಹಾಗೂ ನಿಯಮ 330ರಡಿಯಲ್ಲಿ ಸ್ವೀಕರಿಸಲಾದ ಒಟ್ಟು 125ರ ಪೈಕಿ 39 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**9. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಲಿಖಿತ ಹೇಳಿಕೆಗಳ ಮಂಡನೆ.**

**ಅ) ಡಿಪ್ಲೋಮಾ ಪರೀಕ್ಷೆ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಭಾವನೆ ಪರಿಷ್ಕರಿಸುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಮಂಡ್ಯ ಜಿಲ್ಲೆಯಲ್ಲಿನ ಕಂದಾಯ ಇಲಾಖೆಯ ಅಧಿಕಾರಿಗಳ ಬೇಜವಾಬ್ದಾರಿಯಿಂದ ಸಾಮಾಜಿಕ ಭದ್ರತಾ ಯೋಜನೆಗಳಡಿ ವೃದ್ಧರು, ವಿಧವೆಯರು, ಅಂಗವಿಕಲರು ಸೇರಿ ವಿವಿಧ ಸ್ಥರದ ಜನರಿಗೆ ನೀಡುವ ಮಾಸಿಕ ಪಿಂಚಣಿಯು ಸ್ಥಗಿತಗೊಂಡಿರುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಸಭಾಪತಿಯವರು:** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಪ್ರತಿಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**10. ಪ್ರಕಟಣೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ:23.03.2020ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತವೆಯೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ:

1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2020
2) ಕರ್ನಾಟಕ ರೇಸ್‌ಕೋರ್ಸ್‌ಗಳಿಗೆ ಪರವಾನಗಿ ನೀಡುವ (ತಿದ್ದುಪಡಿ) ವಿಧೇಯಕ, 2020
3) ಕೈಗಾರಿಕಾ ವಿವಾದಗಳಿಗೆ ಕರ್ನಾಟಕ (ತಿದ್ದುಪಡಿ) ವಿಧೇಯಕ, 2020
4) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಮುಚ್ಚಯಗಳ (ತಿದ್ದುಪಡಿ) ವಿಧೇಯಕ, 2020

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಪ್ರತಿಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**11. ಸಾರಾಂಶ**

**ಸಭಾಪತಿಯವರು:-** ವಿಧಾನ ಪರಿಷತ್ತಿನ 140ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:17.02.2020 ರಿಂದ 20.02.2020 ರವರೆಗೆ ಹಾಗೂ 02.03.2020 ರಿಂದ 24.03.2020 ರವರೆಗೆ ಒಟ್ಟು 21 ದಿನಗಳು ಅಂದರೆ, 110 ಗಂಟೆ ಕಾಲ ನಡೆಸಲಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕ:17.02.2020ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ದಿನಾಂಕ:**09.03.2020ರಂದು** ಸದನವು ವಂದನಾರ್ಪಣಾ ನಿರ್ಣಯವನ್ನು ಮಂಡಿಸಿ ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ **23** ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ:18.02.2020 ರಂದು ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

ದಿನಾಂಕ:05.03.2020ರಂದು 2020-2021ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಲಾಗಿದ್ದು, ಚರ್ಚೆಯಾಗಿರುತ್ತದೆ.

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿಯವರು ಒಪ್ಪಿಸಿದ ಅರ್ಜಿಯನ್ನು ಪರಿಶೀಲಿಸಲು ಅರ್ಜಿಗಳ ಸಮಿತಿಗೆ ವಹಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ **96ನೇ** ವರದಿಯನ್ನು, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ **ಮೊದಲನೇ** ವರದಿಯನ್ನು, ಅರ್ಜಿಗಳ ಸಮಿತಿಯ 27ನೇ ವರದಿಯನ್ನು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ **36ನೇ** ವರದಿಯನ್ನು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ **ಎರಡನೇ** ಮತ್ತು **ಮೂರನೇ** ವರದಿಯನ್ನು, ಅಧೀನ ಶಾಸನ ರಚನಾ ಸಮಿತಿಯ 48ನೇ ವರದಿಯನ್ನು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿಯ **29ನೇ** (ಅನುಪಾಲನಾ) ವರದಿ ಮತ್ತು **30ನೇ** ಮಧ್ಯಂತರ ವಿಶೇಷ ವರದಿ ಹಾಗೂ **31ನೇ** ಮಧ್ಯಂತರ ವರದಿಯನ್ನು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ **35ನೇ** ವರದಿಯನ್ನು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ **ಮೊದಲನೇ** ವರದಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿ **(ಸಂಖ್ಯೆ-5),** 2019-20ನೇ ಸಾಲಿನ ಪೂರಕ ಅಂದಾಜುಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3ನೇ ಮತ್ತು ಅಂತಿಮ ಕಂತನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ **ನಾಲ್ಕು** ಪಟ್ಟಿಗಳನ್ನು ಮಂಡಿಸಲಾಯಿತು.

ನವೆಂಬರ್ 26ರಂದು ಸಂವಿಧಾನ ದಿನಾಚರಣೆ ಆಚರಿಸುವ ಸಂದರ್ಭದಲ್ಲಿ ಸದನದಲ್ಲಿ ಸಂವಿಧಾನದ ಕುರಿತು ಚರ್ಚಿಸಲು ತೀರ್ಮಾನಿಸಿದ ರೀತ್ಯಾ ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆಯನ್ನು 8 ದಿವಸಗಳವರೆಗೆ ಅಂದರೆ 25 ಗಂಟೆ 33 ನಿಮಿಷಗಳ ಕಾಲ ನಡೆಸಲಾಗಿರುತ್ತದೆ.

ಪ್ರಸ್ತುತ ಅಧಿವೇಶನದಲ್ಲಿ 2241 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 225 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, 197 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಮತ್ತು ಲಿಖಿತ ಮೂಲಕ ಉತ್ತರಿಸುವ ಒಟ್ಟು 1705 ಪ್ರಶ್ನೆಗಳ ಪೈಕಿ 1437 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 204 ಸೂಚನೆಗಳನ್ನು ಸ್ವೀಕರಿಸಿದ್ದು, 03 ಸೂಚನೆಗಳಿಗೆ ಉತ್ತರಿಸಲಾಯಿತು ಹಾಗೂ 71 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು. ನಿಯಮ 330ರಡಿಯಲ್ಲಿ 125 ಸೂಚನೆಗಳನ್ನು ಸ್ವೀಕರಿಸಿದ್ದು, 03 ಸೂಚನೆಗಳಿಗೆ ಉತ್ತರಿಸಲಾಯಿತು ಹಾಗೂ 39 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ಎ ಅಡಿಯಲ್ಲಿ ಒಟ್ಟು 15 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ ಒಂದು ಸೂಚನೆಗೆ ಉತ್ತರಿಸಲಾಯಿತು ಹಾಗೂ 09 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆಯ ಒಟ್ಟು 44 ಪ್ರಸ್ತಾವಗಳ ಪೈಕಿ 37 ಪ್ರಸ್ತಾವನೆಗಳಿಗೆ ಸದನ ಉತ್ತರವನ್ನು ಮಂಡಿಸಲಾಯಿತು.

ನಿಯಮ **59ರ ಅಡಿಯಲ್ಲಿ** 02 ಸೂಚನೆಯನ್ನು ಸ್ವೀಕರಿಸಲಾಗಿದ್ದು, ಅವುಗಳನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚಿಸಿ ಉತ್ತರಿಸಲಾಗಿರುತ್ತದೆ.

ನಿಯಮ **68ರ** ಅಡಿಯಲ್ಲಿ ನಾಲ್ಕು ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಸದರಿ ಸೂಚನೆಗಳಲ್ಲಿ 2 ಸೂಚನೆಗಳನ್ನು ಚರ್ಚಿಸಿ ಉತ್ತರಿಸಲಾಗಿರುತ್ತದೆ.

ನಿಯಮ 58ರ ಅಡಿಯಲ್ಲಿ ಚರ್ಚಿಸಲು 07 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, 01 ಸೂಚನೆಗೆ ಉತ್ತರಿಸಲಾಯಿತು.

ಪ್ರಸಕ್ತ ಅಧಿವೇಶನದಲ್ಲಿ ಎರಡು ಹಕ್ಕುಚ್ಯುತಿ ಸೂಚನೆಗಳನ್ನು ಮಂಡಿಸಲಾಗಿದ್ದು, ಅವುಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೋತ್ತರ ಅವಧಿಯಲ್ಲಿ ಚರ್ಚಿಸಲಾದ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಕುರಿತು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ಬಳಕೆಯಾಗದಿರುವ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಿ ಸದನದ ಒಪ್ಪಿಗೆ ಪಡೆದು 2 ಸದನ ಸಮಿತಿಗಳನ್ನು ರಚಿಸಲಾಗಿರುತ್ತದೆ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 13 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಸದನವನ್ನು ರಾಷ್ಟ್ರಗೀತೆಯೊಂದಿಗೆ ಮಧ್ಯಾಹ್ನ 03 ಗಂಟೆ 11 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)**

* * * * *

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”